ವಿಜಯಪುರ | ಸಂಪುಟ 02 | ಸಂಚಿಕೆ 30 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com | RNI NO: KARKAN/2023/86203 | ಬುಧವಾರ, ಮಾರ್ಚ್ 20, 2024



"ಬಿಜೆಪಿಯು ಜೆಡಿಎಸ್ ಮುಗಿಸುವ ಕೆಲಸ ಮಾಡುತ್ತಿದೆ. ಈಗ ಬಿಜೆಪಿಯವರ ಕೈಯಲ್ಲಿ ಜೆಡಿಎಸ್ ನವರು ಸಿಕ್ಕಿಹಾಕಿಕೊಂಡಿದ್ದಾರೆ. ಹೊರಗೆ ಬರುವುದು ಕೂಡ ಈಗ ಜೆಡಿಎಸ್ ಗೆ ಕಷ್ಟವಾಗಿದೆ. ಕುಮಾರಸ್ವಾಮಿಗೆ ಈಗ ತಮ್ಮ ತಪ್ಪು ಅರಿವಾಗುತ್ತಿರಬಹುದು, ಆದ್ರೆ ಬಹಳ ತಡವಾಗಿಬಿಟ್ಟಿದೆ."

– ದಿನೇಶ್ ಗುಂಡೂರಾವ್
ಆರೋಗ್ಯ ಸಚಿವರು

**3 ವಾರಗಳಲ್ಲಿ ಪ್ರತಿಕ್ರಿಯೆ ನೀಡುವಂತೆ ಕೇಂದ್ರಕ್ಕೆ ಸೂಚನೆ । ಮುಂದಿನ ವಿಚಾರಣೆ ಏಪ್ರಿಲ್ 9ಕ್ಕೆ ಮುಂದೂಡಿಕೆ**

# CAA ಜಾರಿಗೆ ತಡೆ ನೀಡಲು ಸುಪ್ರೀಂ ಕೋರ್ಟ್ ನಕಾರ

ನವದೆಹಲಿ: ಪೌರತ್ವ (ತಿದ್ದುಪಡಿ) ಕಾಯ್ದೆಯ ನಿಮಯಗಳ ಅನುಷ್ಠಾನಕ್ಕೆ ತಡೆ ಕೋರಿ ಸಲ್ಲಿಸಲಾಗಿರುವ ಅರ್ಜಿಗಳಿಗೆ ಮೂರು ವಾರಗಳಲ್ಲಿ ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಿರುವ ಸುಪ್ರೀಂ ಕೋರ್ಟ್, ಸಿಎಎ ಜಾರಿಗೆ ತಡೆ ನೀಡುವ ಯಾವುದೇ ಮಧ್ಯಂತರ ಆದೇಶ ನೀಡಲು ಮಂಗಳವಾರ ನಿರಾಕರಿಸಿದೆ.

2024ರ ಪೌರತ್ವ ತಿದ್ದುಪಡಿ ನಿಯಮಗಳ ಜಾರಿಯನ್ನು ಪ್ರಶ್ನಿಸುವ ಅರ್ಜಿಗಳಿಗೆ ಪ್ರತಿಕ್ರಿಯಿಸಲು ಕೇಂದ್ರ ಸರ್ಕಾರಕ್ಕೆ ಸಮಂಜಸವಾದ ಸಮಯವನ್ನು ನೀಡಬೇಕು ಎಂದು ಒತ್ತಿಹೇಳಿರುವ ಮುಖ್ಯ ನ್ಯಾಯಮೂರ್ತಿ ಡಿವೈ ಚಂದ್ರಚೂಡ್ ನೇತೃತ್ವದ ಪೀಠವು ಮುಂದಿನ ವಿಚಾರಣೆಯನ್ನು ಏಪ್ರಿಲ್ 9 ಕ್ಕೆ ಮುಂದೂಡಿದೆ.

ಕೇಂದ್ರ ಸರ್ಕಾರದ ಪರ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಸಿಎಎ ಅನುಷ್ಠಾನವನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ 20 ಅರ್ಜಿಗಳಿಗೆ ಉತ್ತರ ನೀಡಲು ನಾಲ್ಕು ವಾರಗಳ ಕಾಲಾವಕಾಶ ಬೇಕು ಎಂದು ಪೀಠಕ್ಕೆ ತಿಳಿಸಿದರು.



ಪೌರತ್ವ ತಿದ್ದುಪಡಿ ಕಾಯ್ದೆ–2019ರ ಸಾಂವಿಧಾನಿಕ ಮಾನ್ಯತೆಯನ್ನು ಪ್ರಶ್ನಿಸಿರುವ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ವಿಲೇವಾರಿ ಮಾಡುವ ತನಕ ಸಿಎಎ ನಿಯಮಗಳ ಜಾರಿಗೆ ತಡೆ ನೀಡಬೇಕು ಎಂದು ಅರ್ಜಿಗಳಲ್ಲಿ ಕೋರಲಾಗಿದೆ.

ಪೌರತ್ವ ತಿದ್ದುಪಡಿ ಕಾಯ್ದೆ–2019ಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ಕೇಂದ್ರ ಸರ್ಕಾರವು ಮಾರ್ಚ್ 11 ರಂದು ಅಧಿಸೂಚನೆಯಲ್ಲಿ ಪ್ರಕಟಿಸಿದೆ. ಯಾವುದೇ ದಾಖಲೆಗಳು ಇಲ್ಲದೆ ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಅಫ್ಘಾನಿಸ್ತಾನದಿಂದ 2014ರ ಡಿಸೆಂಬರ್ 31ಕ್ಕೂ ಮೊದಲು ಭಾರತವನ್ನು ಪ್ರವೇಶಿಸಿದ ಮುಸ್ಲಿಮೇತರ–ರಿಗೆ ಭಾರತದ ಪೌರತ್ವವನ್ನು ಈ ಕಾಯ್ದೆ ನೀಡುತ್ತದೆ.

ಮೇಲಿನ ಮೂರು ದೇಶಗಳಲ್ಲಿ ದೌರ್ಜನ್ಯಕ್ಕೆ ಗುರಿಯಾಗಿ ಭಾರತಕ್ಕೆ ಬಂದ ಹಿಂದೂ, ಸಿಖ್, ಜೈನ, ಬೌದ್ಧ, ಪಾರ್ಸಿ ಮತ್ತು ಕ್ರೈಸ್ತ ಸಮುದಾಯಕ್ಕೆ ಸೇ–ರಿದವರಿಗೆ ಭಾರತದ ಪೌರತ್ವ ದೊರೆಯಲಿದೆ.

ಪೌರತ್ವ ತಿದ್ದುಪಡಿ ಮಸೂದೆಗೆ ರಾಷ್ಟ್ರಪತಿಯವರು 2019ರ ಡಿಸೆಂಬರ್‌ನಲ್ಲಿ ಅಂಕಿತ ಹಾಕಿದ್ದರು. ಆದರೆ, ಈ ಕಾನೂನು ವಿರೋಧಿಸಿ ದೇಶದ ಹಲವು ಕಡೆಗಳಲ್ಲಿ ಪ್ರತಿಭಟನೆಗಳು ನಡೆದಿದ್ದವು. ಕಾಯ್ದೆಗೆ ಸಂಬಂಧಿಸಿದ ನಿಯಮಗಳನ್ನು ಇದುವರೆಗೆ ಅಧಿಸೂಚನೆಯಲ್ಲಿ ಪ್ರಕಟಿಸಿರಲಿಲ್ಲ. ಹೀಗಾಗಿ ಕಾಯ್ದೆ ಜಾರಿಗೆ ಬಂದಿರಲಿಲ್ಲ. ಇತ್ತೀಚೆಗೆ ಕೇಂದ್ರ ಸರ್ಕಾರ ಅಧಿಸೂಚನೆಯನ್ನು ಹೊರಡಿಸಿತ್ತು.

## ಮಹಾರಾಷ್ಟ್ರ: ಅಜಿತ್ ಪವಾರ ಬಣಕ್ಕೆ ಗಡಿಯಾರ ಚಿಹ್ನೆ

ಉದಯರಶ್ಮಿ ನ್ಯೂಸ್

ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ) ಎರಡು ಬಣಗಳ ಹೆಸರುಗಳು ಮತ್ತು ಚುನಾವಣಾ ಚಿಹ್ನೆಗಳು ಸದ್ಯಕ್ಕೆ ಚುನಾವಣಾ ಆಯೋಗವು ನಿರ್ಧ–ರಿಸಿದಂತೆ ಉಳಿಯುತ್ತದೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.



ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಯಥಾಸ್ಥಿತಿ ಕಾಪಾಡಿಕೊಳ್ಳುವಂತೆ ಸಲಹೆ ಕೋರ್ಟ್ ನೀಡಿದ್ದು, ಈ ಆದೇಶವು ತಾತ್ಕಾಲಿಕವಾಗಿದ್ದು, ಚುನಾವಣಾ ಆಯೋಗದ ನಿರ್ಧಾರದ ವಿರುದ್ಧ ಪಕ್ಷದ ಶರದ್ ಪವಾರ್ ಬಣವು ಸಲ್ಲಿಸಿದ ಸವಾಲಿನ ವಿಚಾರಣೆಯ ಸಂದರ್ಭದಲ್ಲಿ ಹೊರಡಿಸಿದ ನ್ಯಾಯಾಲಯದ ಆದ–ೇಶಕ್ಕೆ ಕಕ್ಷಿದಾರರು ಪ್ರತಿಕ್ರಿಯಿಸಿದ ನಂತರ ಈ ವಿಚಾರವನ್ನು ಮರುಪ–ರಿಶೀಲಿಸಲಾಗುವುದು ಎಂದು ಹೇಳಿದೆ.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಕೆವಿ ವಿಶ್ವನಾಥನ್ ಅವರ ಪೀಠವು ಅಜಿತ್ ಪವಾರ್ ಬಣವು ಗಡಿಯಾರ ಚಿಹ್ನೆಯನ್ನು ಬಳಸಲು ಸಾಧ್ಯವಾಗುತ್ತದೆ. ಆದರೆ, ಅವರು ಈ ವಿಷಯವು ನ್ಯಾಯಾಂಗ ವಿಚಾರಣೆಯಲ್ಲಿದೆ ಎಂದು ಹೇಳುವ ಜಾಹೀರಾತುಗಳನ್ನು ಪ್ರಕಟಿಸಬೇಕು. ಚುನಾವಣಾ ಸಂಬಂಧಿತ ಎಲ್ಲಾ ದೃಶ್ಯ–ಶ್ರಾವ್ಯ ಜಾಹೀರಾತುಗಳು ಮತ್ತು ಬ್ಯಾನರ್‌ಗಳು, ಪೋಸ್ಟರ್‌ಗಳಂತಹ ಪ್ರಚಾರ ಸಾಮಗ್ರಿಗಳಲ್ಲಿ ಸಾರ್ವಜನಿಕ ಸೂಚನೆಗಳು ಇರಬೇಕು ಎಂದು ಹೇಳಿದೆ.

ಶರದ್ ಪವಾರ್ ಬಣವು "ಮನುಷ್ಯ ಊದುವ ಕಹಳೆ" ಚಿಹ್ನೆ ಮತ್ತು ನ್ಯಾಶನಲಿಸ್ಟ್ ಕಾಂಗ್ರೆಸ್ ಪಕ್ಷ (ಶರದ್ ಚಂದ್ರ ಪವಾರ್) ಹೆಸರನ್ನು ಬಳಸಬಹುದು ಎಂದು ನ್ಯಾಯಾಲಯ ಹೇಳಿದೆ. ಅವುಗಳನ್ನು ಯಾವುದೇ ಪಕ್ಷಕ್ಕೆ ಮರುಹಂಚಿಕೆ ಮಾಡದಂತೆ ಚುನಾವಣಾ ಆಯೋಗವನ್ನು ಕೇಳಿದೆ.

ಶರದ್ ಪವಾರ್ ಸ್ಥಾಪಿಸಿದ ಅವಿಭಜಿತ ಎನ್‌ಸಿಪಿಯು ತನ್ನ ಚುನಾವಣಾ ಚಿಹ್ನೆಯಾಗಿ "ಗಡಿಯಾರ" ಹೊಂದಿತ್ತು, ಇದನ್ನು ಕಳೆದ ತಿಂಗಳು ಚುನಾವಣಾ ಆಯೋಗವು ಪಕ್ಷದ ಹೆಸರಿನೊಂದಿಗೆ ಅಜಿತ್ ಪವಾರ್ ಬಣಕ್ಕೆ ನೀಡಿತು.

## ಅಕ್ರಮವಾಗಿ ಸಾಗಿಸುತ್ತಿದ್ದ ರೂ.2.93ಕೋಟಿ ನಗದು ವಶ



ಉದಯರಶ್ಮಿ ನ್ಯೂಸ್

ವಿಜಯಪುರ: ಅಕ್ರಮವಾಗಿ ಸಾಗಿಸಲಾಗುತ್ತಿದ್ದ ರೂ. 2,93,50000 ಕೋ. ನಗದನ್ನು ವಿಜಯಪುರ ಸಿಇಎನ್ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಈ ಕುರಿತು ಮಾಹಿತಿ ನೀಡಿರುವ ವಿಜಯಪುರ ಎಸ್ಪಿ ಋಷಿಕೇಶ ಸೋನಾವಣೆ, ತೆಲಂಗಾಣದ ಹೈದರಾಬಾದಿನಿಂದ ರಾಜ್ಯದ ಹುಬ್ಬಳ್ಳಿಗೆ ಅಕ್ರಮವಾಗಿ ಹಣ ಸಾಗಿಸಲಾಗುತ್ತಿದೆ ಎಂಬ ಮಾಹಿತಿ ಬಂದಿತ್ತು. ಈ ಹಿನ್ನೆಲೆಯಲ್ಲಿ ಪೊಲೀಸ–ರಿಗೆ ಮಾಹಿತಿ ನೀಡಲಾಗಿತ್ತು. ಅದರಂತೆ ಸೋಮವಾರ ರಾತ್ರಿ ಸಿಇಎನ್ ಪೊಲೀಸ್ ಠಾಣೆಯ ಸಿಪಿಐ ಸುನೀಲಕುಮಾರ ನಂದೇಶ್ವರ, ಸಿಬ್ಬಂದಿಯಾದ ಎಂ. ಕೆ. ಹಾವಡಿ, ಡಿ. ಆರ್. ಪಾಟೀಲ, ಎಂ. ಬಿ. ಪಾಟೀಲ, ಮಲ್ಲು ಹೂಗಾರ ಅವರು ವಿಜಯಪುರ ನಗರದ ಸಿಂದಗಿ ಬೈಪಾಸ್ ನಲ್ಲಿ ಕಾರ್ಯಾಚರಣೆ ನಡೆಸಿ ಯಶಸ್ವಿಯಾಗಿದ್ದಾರೆ ಎಂದು ತಿಳಿಸಿದ್ದಾರೆ.ಕಾರ್ಯಾಚರಣೆಯಲ್ಲಿ ಪಾಲ್ಗೊಂಡ ಪೊಲೀಸರಿಗೆ ಬಹುಮಾನ ನೀಡಿದ ವಿಜಯಪುರ ಎಸ್ಪಿ ಋಷಿಕೇಶ ಸೋನಾವಣೆ ಈ ಸಂಬಂಧ ಇಬ್ಬರು ಆರೋಪಿಗಳಾದ ಮಹಾರಾಷ್ಟ್ರದ ಸಾಂಗಲಿ ಜಿಲ್ಲೆಯ ಬಾಲಾಜಿ ನಿಕ್ಕಂ ಮತ್ತು ಸಚೀನ ಮೋಹಿತೆ ಎಂಬುವರನ್ನು ಬಂಧಿಸಲಾಗಿದೆ. ಅಲ್ಲದೇ, ಅವರು ಹಣ ಸಾಗಿಸಲು ಬಳಸಿದ ಎಂಎಚ್–01/ ಸಿಡಿ–7537 ಕಾರು ಹಾಗೂ ಎರಡು ಮೊಬೈಲ್ ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಎಸ್ಪಿ ಮಾಹಿತಿ ನೀಡಿದ್ದಾರೆ.


ಅಲ್ಲದೇ, ಈ ಕಾರ್ಯಾಚರಣೆಯಲ್ಲಿ ಪಾಲ್ಗೊಂಡ ಪೊಲೀಸ್ ಅಧಿಕಾ–ರಿಗಳು ಮತ್ತು ಸಿಬ್ಬಂದಿಗೆ ಬಹುಮಾನ ಘೋಷಿಸಿದ್ದಾರೆ

### ರಾಜ ನುಡಿ

ದೇವರು ಮಂದಿರಕ್ಕಿಂತ, ಮನುಷ್ಯನ ಹೃದಯ ಮಂದಿರವನ್ನು ಇಷ್ಟ ಪಡುತ್ತಾನಂತೆ. ಏಕೆಂದರೆ ಮಂದಿರದಲ್ಲಿ ಮನುಷ್ಯನ ಆಟ ನಡೆಯುತ್ತದೆ. ಹೃದಯದಲ್ಲಿ ಕೇವಲ ದೇವರದ್ದು ಮಾತ್ರ ನಡೆಯುತ್ತದೆ. ಹೀಗಾಗಿ ಹೃದಯದಲ್ಲಿ ಪ್ರೀತಿಯ ಹೊರತು ಏನನ್ನೂ ಇಟ್ಟುಕೊಳ್ಳಬೇಡಿ.

–ಡಾ. ರಾಜಶೇಖರ ನಾಗೂರ

### ವಚನ ಚಿಂತನ 327



*ಎನ್ನೊಳಗೆ ಗುಹೇಶ್ವರ, ಹೊರಗೆ ಮಹಾಲಿಂಗ*

*ಸಕಲವೆಲ್ಲ ಲಿಂಗದೊಳಗೆ ತೋರಿದನು*
*ಆ ಲಿಂಗದ ಬೆಳಗ ಸಕಲದೊಳಗೆ ತೋರಿದನು*
*ಎನ್ನ ಮನಕ್ಕೆ ಅತಿಶಯವಾಗಿ ತೋರಿ ತೋರಿ ರಕ್ಷಿಸಿದನು*
*ಎನ್ನೊಳಗೆ ತನ್ನ ತೋರಿದನು, ತನ್ನೊಳಗೆ ಎನ್ನ ತೋರಿದನು*
*ಮತ್ತೆ ಎರಡವನೇಕಮಾಡಿ, ಎನ್ನೊಳಗೆ ಗುಹೇಶ್ವರನಾದನು*
*ಹೊರಗೆ ಮಹಾಲಿಂಗವಾಗಿ ನಿಂದನು ಶ್ರೀಗುರುವು.*

*– ಅಲ್ಲಮಪ್ರಭುಗಳು*

ಅಲ್ಲಮಪ್ರಭುಗಳು ಈ ವಚನದಲ್ಲಿ ಸ್ಪಷ್ಟವಾಗಿ ಹೇಳಿದಂತೆ ಎನ್ನೊಳಗೆ ತನ್ನ ತೋ–ರಿದನು, ತನ್ನೊಳಗೆ ಎನ್ನ ತೋರಿದನು ಎನ್ನುವಲ್ಲಿ ಲಿಂಗಪೂಜೆಯಿಂದ ನಮ್ಮ ಚೈತನ್ಯವನ್ನು ನಾವು ಅರಿಯಬಹುದು, ಅಲ್ಲದೆ ಪಿಂಡಾಂಡದಲ್ಲಿಯ ಬೆಳಗು ಮತ್ತು ಬ್ರಹ್ಮಾಂಡದಲ್ಲಿಯ ಬೆಳಗು ಒಂದೇ ಎಂಬ ಸತ್ಯವನ್ನು ಅರಿಯಬಹುದು. ಅವೆರಡನ್ನು ಒಂದುಮಾಡಿ ಅನುಭವಿಸುವುದೇ ಲಿಂಗಪೂಜೆಯ ಮುಖ್ಯ ಉದ್ದೇಶವೆನ್ನುವುದನ್ನು ಅಲ್ಲಮರು ಸ್ಪಷ್ಟಪಡಿಸಿದ್ದಾರೆ, ಅಂತೆಯೇ ಸಕಲವೆಲ್ಲವ ಲಿಂಗದೊಳಗೆ ತೋರಿದನು, ಆ ಲಿಂಗದ ಒಳಗೆ ಸಕಲವ ತೋರಿದನು ಎಂದಿದ್ದಾರೆ. ನಮ್ಮೊಳಗೆ ಅಡಗಿರುವ ಚೈತನ್ಯವನ್ನು ತೋರುವ ಸಾಧನವೆಂದರೆ ಇಷ್ಟಲಿಂಗ. ಇದನ್ನು ದಯಪಾಲಿಸಿದ ಮಹಾಗುರು ಬಸವಣ್ಣನವರು ಮಹಾಲಿಂಗ(ದೈವ)ಸ್ವರೂಪಿಯಾಗಿ ನಮ್ಮೊಂದಿಗಿದ್ದಾರೆ ಎಂದು ನೆನೆದಿದ್ದಾರೆ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

## ಬಿಜೆಪಿಯಿಂದ ಮಂಜುನಾಥ್ ಸ್ಪರ್ಧೆಯಿಂದ ಜೆಡಿಎಸ್ ಆತ್ಮಹತ್ಯೆ :ಡಿಕೆಶಿ

ಉದಯರಶ್ಮಿ ನ್ಯೂಸ್

ಬೆಂಗಳೂರು: ಮಾಜಿ ಪ್ರಧಾನಿ ಎಚ್ ಡಿ ದೇವೇಗೌಡ ಅವರ ಅಳಿಯ ಡಾ. ಸಿ ಎನ್ ಮಂಜುನಾಥ್ ಅವರನ್ನು ಬಿಜೆಪಿ ಟಿಕೆಟ್ ನಲ್ಲಿ ಕಣಕ್ಕಿಳಿಸುವ ಮೂಲಕ ಜೆಡಿಎಸ್ ಆತ್ಮಹತ್ಯೆ ಮಾಡಿಕೊಳ್ಳುತ್ತಿದೆ ಎಂದು ಉಪ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರು ಮಂಗಳವಾರ ಹೇಳಿದ್ದಾರೆ.

ಖ್ಯಾತ ಹೃದ್ರೋಗ ತಜ್ಞ ಹಾಗೂ ಸರ್ಕಾರಿ ಸ್ವಾಮ್ಯದ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿವೃತ್ತ ನಿರ್ದೇಶಕ ಮಂಜುನಾಥ್ ಅವ–ರಿಗೆ ಬಿಜೆಪಿ ಬೆಂಗಳೂರು ಗ್ರಾಮಂತರ ಕ್ಷೇತ್ರದಿಂದ ಟಿಕೆಟ್ ನೀಡಿದೆ.

ಡಿಕೆ ಶಿವಕುಮಾರ್ ಅವರ ಸಹೋದರ ಹಾಗೂ ಹಾಲಿ ಸಂಸದ ಡಿ ಕೆ ಸುರೇಶ್ ವಿರುದ್ಧ ಮಂಜುನಾಥ್ ಅವರು ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದಾರೆ.



ಎರಡು ಸ್ಥಾನಕ್ಕಾಗಿ ಬಿಜೆಪಿ ಜೊತೆ ಜೆಡಿಎಸ್ ಮೈತ್ರಿ ಮಾಡಿಕೊಳ್ಳಬೇಕಿತ್ತೆ ಎಂಬ ಜೆಡಿಎಸ್ ನಾಯಕ ಎಚ್ ಡಿ ಕುಮಾರಸ್ವಾಮಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಡಿಕೆಶಿ, ನಾನು ಇದನ್ನು ನಿರೀಕ್ಷಿಸಿದ್ದೆ. ಬಿಜೆಪಿ ಜತೆಗಿನ ಮೈತ್ರಿಯಿಂದ ಜೆಡಿಎಸ್ ಮುಜುಗರಕ್ಕೀಡಾಗಿದೆ ಎಂದರು.

ಸದಾಶಿವನಗರದ ತಮ್ಮ ನಿವಾಸದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಶಿವಕುಮಾರ್, "ಬಿಜೆಪಿಯು ಇತರ ರಾಜ್ಯಗಳಲ್ಲಿಯೂ ತನ್ನ ಮಿತ್ರ ಪಕ್ಷಗಳಿಗೆ ಈ ರೀತಿ ಮಾಡುತ್ತಿದೆ. ಇದು ಅವರ ಆಂತರಿಕ ವಿಷಯ. ಅವರೇ ನಿರ್ಧರಿಸಲಿ".


ಆದರೆ ಡಾ.ಮಂಜುನಾಥ್ ಅವರನ್ನು ಬಿಜೆಪಿ ಟಿಕೆಟ್‌ನಲ್ಲಿ ಕಣಕ್ಕಿಳಿಸುವ ಮೂಲಕ ಜೆಡಿಎಸ್ ಆತ್ಮಹತ್ಯೆ ಮಾಡಿಕೊಳ್ಳುತ್ತಿದೆ ಎಂದರು.

ಬಿಜೆಪಿ ಸಂಸದ ಹಾಗೂ ಮಾಜಿ ಮುಖ್ಯಮಂತ್ರಿ ಡಿವಿ ಸದಾನಂದಗೌಡ ಅವರನ್ನು ಕಾಂಗ್ರೆಸ್‌ಗೆ ಸೇರಿಸಿಕೊಳ್ಳುವ ಯೋಜನೆ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಡಿಸಿಎಂ, 'ರಾಜಕಾರಣಿಗಳು ಟಿಕೆಟ್ ನಿರಾಕರಿಸಿದಾಗ ಬೇರೆ ಪಕ್ಷದಿಂದ ಚುನಾವಣೆಗೆ ಸ್ಪರ್ಧಿಸುವುದು ಸಹಜ. ಕಾಂಗ್ರೆಸ್ ಪಕ್ಷದ ಸಿದ್ಧಾಂತವನ್ನು ಒಪ್ಪಿಕೊಂಡು ಪಕ್ಷಕ್ಕೆ ಯಾರೇ ಬಂದರೂ ನಾವು ಸ್ವಾಗತಿಸುತ್ತೇವೆ ಎಂದರು.

ಸದಾನಂದಗೌಡರಿಗೆ ಕಾಂಗ್ರೆಸ್ ಟಿಕೆಟ್ ನೀಡುತ್ತೀರಾ? ಎಂಬ ಪ್ರಶ್ನೆಗೆ, ಆ ಬಗ್ಗೆ ನಾನು ಪ್ರತಿಕ್ರಿಯಿಸಲಾರೆ ಎಂದು ಡಿಕೆ ಶಿವಕುಮಾರ್ ಹೇಳಿದ್ದಾರೆ.

## ಹಿರಿಯ ಸಾಹಿತಿ ಡಾ.ನಾಡಗೌಡ ನಿಧನಕ್ಕೆ ಗಣ್ಯರ ಸಂತಾಪ

ಉದಯರಶ್ಮಿ ನ್ಯೂಸ್



ಸಿಂದಗಿ: ನಗರದ ಹಿರಿಯ ಸಾಹಿತಿ, ವೈದ್ಯವೃತ್ತಿಯಲ್ಲಿ ಇದ್ದುಕೊಂಡೇ ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಾ ಅಂಬಿಕಾತನೆಯದತ್ತ ವೇದಿಕೆ ಸ್ಥಾಪಿಸಿ, ತನ್ಮೂಲಕ ಸಾಹಿತ್ಯ ಚಟುವಟಿಕೆಗಳನ್ನು ನಡೆಸುತ್ತಾ ವೇದಿಕೆಯ ಮೂಲಕ ನಾಡಿನ ಹೆಸರಾಂತ ಸಾಹಿತಿಗಳನ್ನು ಹಾಗೂ ಯುವ ಬರಹಗಾರರನ್ನು ಪ್ರೋತ್ಸಾಹಿಸಿ ನಗದು ಬಹುಮಾನಗಳ ಮೂಲಕ ಗೌರವಿಸುತ್ತಿದ್ದ ಹಾಗೂ ಅಂಬಿಕಾತನಯದತ್ತರ ಆಶಯಗಳನ್ನು ನಾಡಿನಾದ್ಯಂತ ಹರಡಿದ ಸಿಂದಗಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ 5ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ತಾಲೂಕಿನಾದ್ಯಂತ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ಚಾಪು ಮೂಡಿಸಿದ್ದ ಹಿರಿಯ ಸಾಹಿತಿ ಡಾ.ಬಿ.ಆರ್.ನಾಡಗೌಡ್ರ ಅವರ ಅಗಲಿಕೆ ಸಾಹಿತ್ಯ ಕ್ಷೇತ್ರಕ್ಕೆ ಒಂದು ತುಂಬಲಾರದ ನಷ್ಟ. ಸಾರಸ್ವತ ಲೋಕದ ಹಿರಿಯ ಕೊಂಡಿಯೊಂದು ಕಳಚಿದಂತಾಗಿದೆ ಎಂದು ಶಾಸಕ ಅಶೋಕ್ ಮನಗೂಳಿ ಸಂತಾಪ ಸೂಚಿಸಿದರು.

ಸಂತಾಪ: ಮಾಜಿ ಶಾಸಕ ರಮೇಶ ಭೂಸನೂರ, ಮಾಜಿ ವಿಪ ಸದಸ್ಯ ಅರುಣ ಶಹಾಪುರ, ಮಾಜಿ ಶಾಸಕ ಶರಣಪ್ಪ ಸುಣಗಾರ, ಅಶೋಕ ವಾರದ, ಕಸಾಪ ತಾಲೂಕಾಧ್ಯಕ್ಷ ಶಿವಾನಂದ ಬಡಾನೂರ, ರಾಜಶೇಖರ ಕೂಚಬಾಳ, ಬಿಜೆಪಿ ಮಂಡಲ ಅಧ್ಯಕ್ಷ ಸಂತೋಷ ಪಾಟೀಲ ಡಂಬಳ, ಬ್ಲಾಕ್ ಕಾಂಗ್ರೆಸ್ ಸಮಿತಿ ತಾಲೂಕಾಧ್ಯಕ್ಷ ಸುರೇಶ್ ಪೂಜಾರ, ಸಾಹಿತಿಗಳಾದ ಡಾ.ಚನ್ನಪ್ಪ ಕಟ್ಟಿ, ಡಾ. ಎಂ.ಎಂ.ಪಡಶೆಟ್ಟಿ, ಮಕ್ಕಳ ಹಿರಿಯ ಸಾಹಿತಿ ಹ.ಮ ಪೂಜಾರ, ಕಾರ್ಯ ನಿರತ ಪತ್ರಕರ್ತರ ಸಂಘದ ಜಿಲ್ಲಾ ಉಪಾಧ್ಯಕ್ಷ ಇಂದುಶೇಖರ ಮಣೂರ, ತಾಲೂಕಾಧ್ಯಕ್ಷ ಆನಂದ ಶಾಬಾದಿ, ಪತ್ರಕರ್ತರಾದ ಮಲ್ಲಿಕಾರ್ಜುನ ಅಲ್ಲಾಪುರ, ರವಿಚಂದ್ರ ಮಲ್ಲೇದ, ಮಹಾಂತೇಶ ನೂಲಾನವರ, ಸುದರ್ಶನ ಜಂಗಣ್ಣಿ, ಭೋಜರಾಜ ದೇಸಾಯಿ, ಗುಂಡು ಕುಲಕರ್ಣಿ, ಗುರುರಾಜ ಮಠ, ಪಂಚಮಸಾಲಿ ಸಮಾಜದ ತಾಲೂಕು ಅಧ್ಯಕ್ಷ ಎಂ.ಎಂ.ಹಂಗರಗಿ ಚಂದ್ರಶೇಖರ ನಾಗರಬೆಟ್ಟ, ಮಲ್ಲನಗೌಡ ಪಾಟೀಲ ಇಬ್ರಾಹಿಂಪುರ, ಶಿವು ಸಬರದ ಸಂಗನಗೌಡ ಪಾಟೀಲ, ಮುತ್ತು ಪಟ್ಟಣಶೆಟ್ಟಿ, ಭೀಮಾಶಂಕರ ತಾರಾಪುರ, ಆಲಮೇಲದ ವೈದ್ಯ ಸಾಹಿತಿ ಡಾ.ಸಮೀರ ಹಾದಿಮನಿ ಸೇರಿದಂತೆ ಶ್ರೀ ಸಂಗಮೇಶ್ವರ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘದ ಸದಸ್ಯರು ಮತ್ತು ಸಾಹಿತ್ಯಾಭಿಮಾನಿಗಳು ಸಂತಾಪ ಸೂಚಿಸಿದ್ದಾರೆ.

## ವಿವಿಧ ಪ್ರಾಧಿಕಾರಗಳ ಅಧ್ಯಕ್ಷರು, ಸದಸ್ಯರಿಗೆ ಸನ್ಮಾನ

ಉದಯರಶ್ಮಿ ನ್ಯೂಸ್

ಸಿಂದಗಿ: ಪಟ್ಟಣದ ಬಂದಾಳ ರಸ್ತೆಯಲ್ಲಿರುವ ಸಂಗಮೇಶ್ವರ ವಿದ್ಯಾಲಯದಲ್ಲಿ ನೆಲೆ ಪ್ರಕಾಶನ ಬಳಗದ ವತಿಯಿಂದ ಕರ್ನಾಟಕ ಸರಕಾರದಿಂದ ನೂತನವಾಗಿ ನೇಮಕಗೊಂಡ ವಿವಿಧ ಪ್ರಾಧಿಕಾರಗಳ ಅಧ್ಯಕ್ಷರ ಹಾಗೂ ಸದಸ್ಯರ ಸನ್ಮಾನ ಸಮಾರಂಭ ನಡೆಯಿತು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಡಾ.ಚನ್ನಪ್ಪ ಕಟ್ಟಿ, ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರ ಸದಸ್ಯ ಎಂ.ಎಸ್.ಮದಬಾವಿ, ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ಡಾ.ಎಂ. ಎಂ. ಪಡಶೆಟ್ಟಿ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯೆ ದ್ರಾಕ್ಷಾಯಿಣಿ ಹುಡೇದ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.




ಈ ವೇಳೆ ನ್ಯೂಜಿಲೆಂಡ್ ಬಸವ ಸಮಿತಿ ಸಂಸ್ಥಾಪಕ ಅಧ್ಯಕ್ಷ ಲಿಂಗಣ್ಣ ಕಲಬುರ್ಗಿ, ಎಂ.ಎಸ್. ಹೈಯಾಳಕರ, ಸಾಹಿತಿ ಮನು ಪತ್ತಾರ, ಶಿವಾನಂದ ಕಲಬುರ್ಗಿ, ಶಿವಕುಮಾರ ಶಿವಸಿಂಪಿಗೇರ ಸೇರಿದಂತೆ ಸಾಹಿತ್ಯಾಭಿಮಾನಿಗಳು ಇದ್ದರು.

# ಪ.ಬಂಗಾಳದಲ್ಲಿನ ದೌರ್ಜನ್ಯ: ಸಾಮರಸ್ಯ ವೇದಿಕೆ ಖಂಡನೆ

ಉದಯರಶ್ಮಿ ನ್ಯೂಸ್

ವಿಜಯಪುರ: ಪಶ್ಚಿಮ ಬಂಗಾಳದ ಸಂದೇಶಖಾಲಿಯಲ್ಲಿ ಮಹಿಳೆಯರು ಮತ್ತು ಕುಟುಂಬಗಳ ಮೇಲಿನ ದೌರ್ಜನ್ಯ ನಡೆದಿರುವುದನ್ನು ಖಂಡಿಸಿ ಸಾಮರಸ್ಯ ವೇದಿಕೆಯಿಂದ



ಜಿಲ್ಲಾ ಆಡಳಿತ ಮುಖಾಂತರ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು

ಈ ವೇಳೆ ಸಾಮರಸ್ಯ ವೇದಿಕೆಯ ಜಿಲ್ಲಾ ಸದಸ್ಯ ಶರಣಪ್ಪ ಬ್ಯಾಳಿ ಮಾತನಾಡಿ, 47 ದಿನಗಳ ಹಿಂದೆ ಐಟಿ ಅಧಿಕಾರಿಗಳ ಮೇಲೆ ನಡೆದ ದಾಳಿ ನಂತರವೇ ಈ ಘೋರ ದೌರ್ಜನದ ಘಟನೆಗಳು ಬೆಳಕಿಗೆ ಬಂದಿವೆ. ಇದು ಪಶ್ಚಿಮ ಬಂಗಾಳ ರಾಜ್ಯದ ಆಡಳಿತ ಮತ್ತು ಪೊಲೀಸ್ ಇಲಾಖೆಯ ವೈಫಲ್ಯದ ಉದಾಹರಣೆ ಮಾತ್ರವಲ್ಲ ಧಾರ್ಮಿಕ ಮತ್ತು ರಾಜಕೀಯ ವಿಷಯಗಳು ಒಳಗೊಂಡಿವೆ. ಈ ಘಟನೆಗಳು ಪಶ್ಚಿಮ ಬಂಗಾಳದ ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಯ, ಆಂತರಿಕ ಪರಿಸ್ಥಿತಿಯನ್ನು ಬಹಿರಂಗಪಡಿಸಿದೆ. ಪರಿಸ್ಥಿತಿ ಎಷ್ಟು ಭೀಕರವಾಗಿದೆ ಎಂದರೆ ದೌರ್ಜನ್ಯ ನಡೆದು ಹಲವು ದಿನಗಳು ಕಳೆದರೂ ಪೊಲೀಸರು ಯಾವುದೇ ಪ್ರಥಮ ಮಾಹಿತಿ ( ಎಫ್ ಐ ಆರ್ ) ದಾಖಲಿಸಿಲ್ಲ. ಆರ್ಥಿಕ, ಧಾರ್ಮಿಕ, ರಾಜಕೀಯ ವಿಷಯಗಳಲ್ಲಿ ಮಹಿಳೆಯರನ್ನು ಸಾಧನವಾಗಿ ಬಳಕೆ ಮಾಡಿಕೊಳ್ಳೋದು ನಾಚಿಕೆಗೇಡಿತನ. ಈ ಕೆಟ್ಟ ಘಟನೆಯನ್ನು ಸಾಮರಸ್ಯ ವೇದಿಕೆ ಖಂಡಿಸುತ್ತಿದೆ ಎಂದರು.

ಪರಶುರಾಮ ರೋಣಿಹಾಳ ಮಾತನಾಡಿ, ಈ ಘಟನೆಯು ಪ್ರಜಾಪ್ರಭುತ್ವದಲ್ಲಿ ನಡೆಯುತ್ತಿರುವ ಮಹಿಳೆಯರು ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯಾಗಿದ್ದು, ತಕ್ಷಣ ಈ ಘಟನೆ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಹಣಮಂತ ಬಿರಾದಾರ, ಸಾಯಿಕುಮಾರ್ ಬಿಸನಾಳ, ಮುದುಕಪ್ಪ ಮದಬಾವಿ, ಅನಿಲ ಸಾಗರ್, ಸಂತೋಷ ಬ್ಯಾಳಿ, ಪ್ರಕಾಶ್ ನಡುವಿನಕೇರಿ, ಹಣಮಂತ ಅಥರ್ಗಾ, ಆಕಾಶ್ ದೊಡ್ಡಮನಿ, ನಾಗರಾಜ ಸಿ ಎಂ, ಸಾಬು ಬ್ಯಾಳಿ, ಮುದುಕಪ್ಪ ಮಾದರ, ರಾಜು ಮಾದರ, ಸುನಿಲ ದೇವರಮನಿ, ಆಕಾಶ ಕಲ್ಲೋಳಿ, ಸಚಿನ ತೆಲಸಂಗ, ಸಾಗರ ಕಲಾಲ, ಅನಿಲ ಮಾದರ, ಅರವಿಂದ್ ಹುಡಿಮನಿ, ಮತ್ತಿತರು ಉಪಸ್ಥಿತರಿದ್ದರು.

# ಕಾಂಗ್ರೆಸ್ ಸರಕಾರ ಪಾಪಿಷ್ಟ ಸರಕಾರ :ಸಂಸದ ಜಿಗಜಿಣಗಿ

ಉದಯರಶ್ಮಿ ನ್ಯೂಸ್

ಕೊಲ್ಹಾರ: ಸಾಮಾಜಿಕ ಕ್ಷೇತ್ರದ ನನ್ನ ರಾಜಕೀಯ 45 ವರ್ಷಗಳ ಜೀವನದಲ್ಲಿ ಭಾವನಾತ್ಮಕವಾಗಿ ಸಂಬಂಧಗಳನ್ನು ಮನುಷ್ಯ ಮನುಷ್ಯರ ನಡುವೆ ಬೆಸೆಯುವ ಮೂಲಕ ರಾಜಕಾರಣ ಮಾಡುತ್ತಾ ಬಂದಿದ್ದು ಒಂದು ಸಣ್ಣ ಜೀವಿಗೂ ಕೂಡ ನಾನು ಹಿಂಸೆ ಮಾಡದೇ ಅಹಿಂಸಾ ತತ್ವದ ಅಡಿ ನಡೆದುಕೊಂಡು ಬರುತ್ತಿದ್ದೇನೆ ಎಂದು ವಿಜಯಪುರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ರಮೇಶ ಜಿಗಜಿಣಗಿ ಹೇಳಿದರು.

ಪಟ್ಟಣದ ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ ಅವರ ತೋಟದ ಮನೆಯ ಆವರಣದಲ್ಲಿ ಸೋಮವಾರ ಸಾಯಂಕಾಲ ನಡೆದ ಭಾರತೀಯ ಜನತಾಪಕ್ಷದ ಬಸವನ ಬಾಗೇವಾಡಿ ಮಂಡಲ ಕಾರ್ಯಕರ್ತರ ಸಭೆಯಲ್ಲಿ ಭಾಗವಹಿಸಿ ಚುನಾವಣಾ ಪ್ರಚಾರ ಸಭೆಯ ಮೊದಲ ಭಾಷಣವನ್ನು ಕೊಲ್ಹಾರದಲ್ಲಿಯೇ ಪ್ರಾರಂಭಿಸಿ ಮಾತನಾಡಿದರು.

ಹುಬ್ಬಳ್ಳಿ ಹುಮನಾಬಾದ ರಾಷ್ಟ್ರೀಯ ಹೆದ್ದಾರಿ 218 ದ್ವಿಪಥವಿದ್ದ ರಸ್ತೆ ಚತುಷ್ಪಥ ಹೆದ್ದಾರಿಯಾಗಿ ಮಂಜೂರಾಗಿದೆ ಎಂದರು.

ಈಗ ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಕಾಂಗ್ರೆಸ್ ಸರಕಾರ ಅತ್ಯಂತ ಪಾಪಿಷ್ಟ ಸರಕಾರವಾಗಿದೆ ಕಾರಣ ಅಧಿಕಾರಕ್ಕೆ ಬಂದು 10 ತಿಂಗಳು ಗತಿಸುತ್ತಾ ಬಂದರೂ ರಾಜ್ಯದ ಯಾವುದೇ ಒಂದು ಪ್ರದೇಶದಲ್ಲಿ ಒಂದು ಹನಿಕೂಡ ಮಳೆರಾಯನ ಕೃಪೆಯಾಗದೇ ಬರಗಾಲದ ಬವಣೆಯನ್ನು ಎದುರಿಸುತ್ತಿರುವುದು ಅತ್ಯಂತ ನೋವಿನ ಸಂಗತಿ ಈ ರಾಜ್ಯದ ಜನತೆಯದಾಗಿದೆ. ಈ ಹಿಂದಿನ ದಿನಮಾನಗಳಲ್ಲಿ ಒಂದು ಮಳೆಯಾಗದೇ ಹೋದರೆ ಇನ್ನೊಂದು ಮಳೆ ಸಂಪೂರ್ಣವಾಗಿ ಜನತೆಗೆ ಆಶಾಕಿರಣವಾಗಿರುತ್ತಿತ್ತು ಗ್ಯಾರಂಟಿ ಯೋಜನೆಗಳಿಂದ ಸಂಸಾರದಲ್ಲಿ ಬಿರುಕು ಮೂಡುವಂತೆ ಮಾಡಿರುವದೇ ಕಾಂಗ್ರೆಸ್ ಸರಕಾರದ ಸಾಧನೆಯಾಗಿದೆ



ಎಂದು ಕುಟುಕಿದರು.

ರಾಜ್ಯ ಬಿಜೆಪಿ ಮುಖಂಡ ಚಂದ್ರಶೇಖರ ಕವಟಗಿ ಮಾತನಾಡಿ, 12 ಬಾರಿ ಚುಣಾವಣೆಯಲ್ಲಿ ಸ್ಪರ್ಧಿಸಿ 11 ಬಾರಿ ವಿಜೇತರಾದ ರಮೇಶ ಜಿಗಜಿಣಗಿ ಅವರ ಸೇವೆ ರಾಜ್ಯದ ಮತ್ತು ದೇಶದ ಜನತೆಗೆ ಸೋಲಿಲ್ಲದಂತೆ ಸಿಕ್ಕ ಸಮಾಜಸೇವೆಯಾಗಿದ್ದು ದೇಶದಲ್ಲಿ ಕಾಂಗ್ರೆಸ್ ಪಕ್ಷವನ್ನು ಹೊರತುಪಡಿಸಿ ಇನ್ಯಾವುದೇ ಪಕ್ಷವೂ ಸತತವಾಗಿ ಮೂರುಬಾರಿ ಅಧಿಕಾರದ ಚುಕ್ಕಾಣಿಯನ್ನು ಹಿಡಿದ ಉದಾಹರಣೆಯೇ ಇಲ್ಲ. ಆದರೆ ಸ್ವಾಭಿಮಾನಿ ಭಾರತ ಜನತೆಯ ಆಶೀರ್ವಾದದಿಂದ ಈಗಾಗಲೇ ಸತತವಾಗಿ ಎರಡು ಬಾರಿ ಭಾರತೀಯ ಜನತಾಪಕ್ಷದ ಮುಖಂಡರಾದ ಪ್ರಧಾನಿ ನರೇಂದ್ರ ಮೋದಿಯವರು ದೇಶದ ಸೇವೆಯನ್ನು ಮಾಡುತ್ತಿದ್ದು ಮೂರನೇಬಾರಿಯೂ ನಿಮ್ಮೆಲ್ಲರ ಆಶೀರ್ವಾದದಿಂದ ಅಧಿಕಾರದ ಚುಕ್ಕಾಣಿ ಹಿಡಿದು ದಾಖಲೆ ನಿರ್ಮಿಸುವಂತಾಗಲು ತಾವೆಲ್ಲರೂ ಶ್ರಮಿಸಬೇಕೆಂದು ಕಾರ್ಯಕರ್ತರಿಗೆ ಕರೆ ಕೊಟ್ಟರು.

ಮಾಜಿ ಸಚಿವ ಎಸ.ಕೆ.ಬೆಳ್ಳುಬ್ಬಿ ಮಾತನಾಡಿ, ಬಸವನ ಬಾಗೇವಾಡಿ ಮತಕ್ಷೇತ್ರದ ಪ್ರತಿಯೊಬ್ಬ ಬಿಜೆಪಿ ಕಾರ್ಯಕರ್ತರು ತಮ್ಮ ತಮ್ಮ ಭೂತ್ ಮಟ್ಟದ ಮತದಾರರನ್ನು ಮತಗಟ್ಟೆಗೆ ಕರೆದುಕೊಂಡು ಬಂದು ಮೇ7 ರಂದು ನಡೆಯುವ ಚುಣಾವಣೆಯಲ್ಲಿ ಹೆಚ್ಚಿನ ಸಂಖ್ಯೆಯ ಮತ ಚಲಾಯಿಸಲು ಶ್ರಮಪಡಬೇಕು. ಮಂಡಲದ ಅಲ್ಪಸಂಖ್ಯಾತ ಘಟಕ ಸೇರಿ 8 ಮೋರ್ಚಾಗಳ ಜವಾಬ್ದಾರಿ ಸ್ಥಾನದ ಕಾರ್ಯಕರ್ತರು ಮನೆಮನೆಗೆ ತೆರಳಿ ಪ್ರಚಾರವನ್ನು ಕೈಕೊಂಡು ಮತ್ತೊಮ್ಮೆ ದೇಶದಲ್ಲಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಒಕ್ಕೂಟ ಅಧಿಕಾರ ಚುಕ್ಕಾಣಿ ಹಿಡಿಯಲು ಕೆಲಸ ಮಾಡಬೇಕೆಂದು ಹೇಳಿದರು.

ಮಾಜಿ ವಿಧಾನ ಪರಿಷತ್ ಸದಸ್ಯ ಅರುಣ ಶಹಾಪೂರ, ಸಂಗಣಗೌಡ ಚಿಕ್ಕೊಂಡ, ಬಸವರಾಜ ಬಿರಾದಾರ, ಶಂಕರಗೌಡ ಪಾಟೀಲ, ಸಿದ್ರಾಮ ಕಾಖಂಡಕಿ, ಜಗದೀಶ ಸುಣಗದ ಅನೇಕ ಪ್ರಮುಖ ಕಾರ್ಯಕರ್ತರು ವೇದಿಕೆ ಮೇಲೆ ಉಪಸ್ಥಿತರಿದ್ದರು.

# ಡಾ.ಅಂಬೇಡ್ಕರ್ ಪುತ್ಥಳಿ ಸ್ಥಾಪನೆಗೆ ಆಗ್ರಹ

ಉದಯರಶ್ಮಿ ನ್ಯೂಸ್



ವಿಜಯಪುರ: ಮಹಾನಗರ ಪಾಲಿಕೆ ಆವರಣದಲ್ಲಿ ಸಂವಿಧಾನ ಶಿಲ್ಪಿ, ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿ ಸ್ಥಾಪನೆ ಮಾಡುವಂತೆ ಆಗ್ರಹಿಸಿ ಭಾರತೀಯ ದ್ರಾವಿಡ ಸೇನಾ, ವಿಜಯಪುರ ವತಿಯಿಂದ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಭಾರತೀಯ ದ್ರಾವಿಡ ಸೇನಾದ ಗೌರವಾಧ್ಯಕ್ಷ ರಮೇಶ ಕವಲಗಿ ಮಾತನಾಡಿ, ಸಂವಿಧಾನ ಶಿಲ್ಪಿ ಬಾಬಾಸಾಹೇಬ ಭೀಮರಾವ ಅಂಬೇಡ್ಕರ್ ರವರು ಇವರು ದೇಶಕ್ಕೆ ಸಂವಿಧಾನ ನೀಡಿ, ಇವರ ಸಂವಿಧಾನದಡಿಯಲ್ಲಿ ಪಾಲಿಕೆಯ ಎಲ್ಲ ಕಾರ್ಯ ಚಟುವಟಿಕೆಗಳನ್ನು ನಡೆಸುತ್ತಾ ಬಂದಿದ್ದು, ಅದೇ ತೆರನಾಗಿ ಅವರ ಗೌರವಾರ್ಥಕವಾಗಿ ಪಾಲಿಕೆ ಆವರಣದಲ್ಲಿ ಅಂಬೇಡ್ಕರವರ ಮೂರ್ತಿ ಪ್ರತಿಷ್ಠಾಪನೆ ಮಾಡಬೇಕು. ಇದರಿಂದ ಭಾರತದ ಸಂವಿಧಾನಕ್ಕೆ ಸಲ್ಲಿಸುವ ಗೌರವ ಆಗುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಉಪಾಧ್ಯಕ್ಷ ಪ್ರಶಾಂತ ಹಟ್ಟಿ, ಜಿಲ್ಲಾ ಉಪಾಧ್ಯಕ್ಷರಾದ ನಾಗಮ್ಮ ಬ್ಯಾಕೋಡ, ವಿಜಯಪುರ ಜಿಲ್ಲಾಧ್ಯಕ್ಷ ಸೋಮು ಹಟ್ಟಿ, ಜಿಲ್ಲಾ ಕಾರ್ಯದರ್ಶಿ ಸಚೀನ ಬಜಂತ್ರಿ, ಮಾರುತಿ ಬೂದಿಹಾಳ, ಸಂತೋಷ ಠಕ್ಕೆ, ಶ್ರೀಧರ ಹಾಳಿಹಾಳ, ಪರಶುರಾಮ ಕೋಲಕಾರ, ಶ್ರೀಧರ ಬಬಲೇಶ್ವರ, ಎನ್. ಬಜರಂಗಿ, ಕಲ್ಮೇಶ ಶಾಪೇಟಿ, ಮಲ್ಲು ಜಾಲಗೇರಿ ಇನ್ನಿತರರು ಉಪಸ್ಥಿತರಿದ್ದರು.

# ಕಾಲುವೆಗೆ ನೀರು ಹರಿಸಿ ; ಜನ–ಜಾನವಾರು ಬದುಕಿಸಿ

ಉದಯರಶ್ಮಿ ನ್ಯೂಸ್

ಇಂಡಿ: ಸತತವಾಗಿ ಬರಗಾಲ ನಿಮಿತ್ಯ ಇಂಡಿ, ಸಿಂದಗಿ ತಾಲೂಕಿನ ರೈತರ ಬದಕು ಬರಗೆಟ್ಟಿದೆ, ಕುಡಿಯಲು ನೀರಿಲ್ಲ ಹಾಗೂ ಕೃಷಿಗೂ ನೀರಿಲ್ಲದ ಕಾರಣ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಜನ – ಜಾನುವಾರು ಕುಡಿಯಲು ಕೂಡಲೇ ಈ ಭಾಗದ ಗುತ್ತಿಬಸವಣ್ಣ ಕಾಲುವೆಗೆ ನೀರು ಹರಿಸಬೇಕು. ಇಲ್ಲದಿದ್ದರೆ ಈ ಭಾಗದ ರೈತರೊಂದಿಗೆ ಏಃಎಓಐ ರಾಂಪುರ ಕಚೇರಿಗೆ ಮುತ್ತಿಗೆ ಹಾಕಬೇಕಾದಿತು ಎಂದು ಬಿಜೆಪಿ ರೈತ ಮೋರ್ಚಾ



ಜಿಲ್ಲಾ ಉಪಾಧ್ಯಕ್ಷ ಶಿವರಾಜ್ ಕೆಂಗನಾಳ ಪತ್ರಿಕೆ ಪ್ರಕಟಣೆ ಮೂಲಕ ಸಂಬಂಧಪಟ್ಟವರಿಗೆ ಎಚ್ಚರಿಕೆ ನೀಡಿದ್ದಾರೆ.

# ಪ್ರಭು ತಳಗೇರಿ ನೇಮಕ

ಉದಯರಶ್ಮಿ ನ್ಯೂಸ್

ಮುದ್ದೇಬಿಹಾಳ: ಭಾರತೀಯ ಜನತಾ ಪಕ್ಷದ ವಿಜಯಪುರ ಜಿಲ್ಲಾ ಯುವ ಮೋರ್ಚಾ ಕಾರ್ಯ ದರ್ಶಿಯನ್ನಾಗಿ ಪ್ರಭು ತಳಗೇರಿ ಅವರನ್ನ ಆಯ್ಕೆ ಮಾಡಿ ಜಿಲ್ಲಾಧ್ಯಕ್ಷ ಬಸವರಾಜ ಹೂಗಾರ ಆದೇಶಿಸಿದ್ದಾರೆ.



# ಗಣಿ ಗ್ರಾಮದಲ್ಲಿ ಜೋಡಿ ಕೊಲೆ

ಉದಯರಶ್ಮಿ ನ್ಯೂಸ್

ಆಲಮಟ್ಟಿ: ಅನೈತಿಕ ಸಂಬಂಧದ ಸಂಶಯದ ಹಿನ್ನೆಲೆಯಲ್ಲಿ ಜೋಡಿ ಕೊಲೆಯಾದ ಘಟನೆ ಸೋಮವಾರ ರಾತ್ರಿ ಸಮೀಪದ ಮಾರಡಗಿ ತಾಂಡಾದ ಬಳಿ ನಡೆದಿದೆ.

ಮೃತರು ಗಣಿ ಗ್ರಾಮದ ಸೋಮನಿಂಗಪ್ಪ ಕಲ್ಲಪ್ಪ ಕುಂಬಾರ (35) ಹಾಗೂ ಪಾರ್ವತಿ ಭೀಮಪ್ಪ ತಳವಾರ (45) ಎಂದು ಗುರುತಿಸಲಾಗಿದೆ.


ಗಣಿ ಗ್ರಾಮಕ್ಕೆ ಬರುವ ಮೊದಲೇ ಇಬ್ಬರನ್ನು ಭೀಕರವಾಗಿ ಕೊಚ್ಚಿ ಕೊಲೆ ಮಾಡಲಾಗಿದೆ. ಕೊಲೆಗೆ ನಿಖರ ಕಾರಣ ಏನು ಎಂಬುದು ತಿಳಿದುಬಂದಿಲ್ಲ. ಆರೋಪಿ ಯಾರು ಎಂಬುದನ್ನು ಪೊಲೀಸರು ದೃಢಪಡಿಸಿಲ್ಲ.

ಸ್ಥಳಕ್ಕೆ ಹೆಚ್ಚುವರಿ ಎಸ್ ಪಿ ರಾಮನಗೌಡ ಹಟ್ಟಿ, ಡಿವೈಎಸ್ ಪಿ ಬಲ್ಲಪ್ಪ ನಂದಗಾವಿ, ಸಿಪಿಐ ಶರಣಗೌಡ ಗೌಡರ ಭೇಟಿ ನೀಡಿದ್ದರು.

ಶ್ವಾನ ದಳ, ಬೆರಳಚ್ಚು ತಂತ್ರಜ್ಞರು ಭೇಟಿ ನೀಡಿದ್ದರು. ನಿಡಗುಂದಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಸರಳತೆಯ ಸಾಕಾರ ಮೂರ್ತಿ ಸುಧಾ ಅಮ್ಮನಿಗೆ ರಾಜ್ಯಸಭಾ ಸದಸ್ಯತ್ವ

ಉದಯರಶ್ಮಿ ದಿನಪತ್ರಿಕೆ



ಅದೊಂದು ಮದುವೆ ಸಮಾರಂಭ. ವಧು ವರರಿಬ್ಬರೂ ಈ ಕಾರ್ಯಕ್ರಮಕ್ಕೆ ಆ ಲೇಖಕಿಯನ್ನು ವಿಶೇಷವಾಗಿ ಪತ್ರ ಮುಖೇನ ಆಹ್ವಾನ ನೀಡಿ ಬರಲೇಬೇಕೆಂದು ಒತ್ತಾಯಿಸಿದ್ದರು. ತಾನು ಮದುವೆಯಾಗಲಿರುವ ವಧು ತೊನ್ನು ರೋಗಕ್ಕೆ ಗುರಿಯಾಗಿದ್ದು ಮುಂದಿನ ಭವಿಷ್ಯ ಹೇಗೆ ಎಂದು ಕಳವಳಗೊಂಡ ವರ ಮದುವೆಯನ್ನು ರದ್ದುಗೊಳಿಸುವ ನಿರ್ಧಾರಕ್ಕೆ ಬಂದು, ಕೊನೆಗೆ ಆ ಲೇಖಕಿಯ 'ಮಹಾಶ್ವೇತೆ' ಕಾದಂಬರಿಯನ್ನು ಓದಿ ಮನಃಪರಿವರ್ತನೆಗೊಂಡು, ನಿಶ್ಚಿತ ವಧುವನ್ನು ವಿನಾಕಾರಣ ನೋಯಿಸಿದುದಕ್ಕೆ ಕ್ಷಮೆ ಕೇಳಿ ಮದುವೆಯ ಮೂಲಕ ಮತ್ತೆ ಒಂದಾದ. ವಧು ವರರು ಈ ಮದುವೆಗೆ ಕಾರಣವೇ ತಾವು ಎಂದು ಆ ಲೇಖಕಿಗೆ ಹೇಳಿ ಆಕೆಯ ಕಾಲಿಗೆ ಬಿದ್ದು ನಮಸ್ಕರಿಸಿ ಆಶೀರ್ವಾದ ಪಡೆದಿದ್ದರು. ಅಷ್ಟು ಶಕ್ತಿ ಆಕೆಯ ಬರವಣಿಗೆಗೆ ಇದೆ.

**ವೀಣಾಂತರಂಗ**



–ವೀಣಾ ಎಚ್. ಪಾಟೀಲ್, ಮುಂಡರಗಿ

ರಾಜ್ಯದ ಗಡಿ ಭಾಗದಲ್ಲಿ ಒಂದು ಅಪ್ಯಾಯಮಾನವಾದ ಸಮಾರಂಭ. ದೇವದಾಸಿಯರಾಗಿದ್ದ ಸಾವಿರಾರು ಮಹಿಳೆಯರ ಪುನರ್ವಸತಿಯ ನಂತರದ ಈ ಕಾರ್ಯಕ್ರಮದಲ್ಲಿ ಸಾವಿರಾರು ಜನ ದೇವದಾಸಿಯರು ತಮ್ಮ ಪ್ರೀತಿಯ ದ್ಯೋತಕವಾಗಿ ಸೀರೆಯಿಂದ ತಯಾರು ಮಾಡಿದ ಕೌದಿಯನ್ನು (ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರ ಭಾಗದಲ್ಲಿ ವಿಶಿಷ್ಟವಾದ ಹಾಸಿಗೆ ಮತ್ತು ಹೊದ್ದಿಕೆಯಾಗಿ ಬಳಸಲ್ಪಡುವ ಸೀರೆ ಮತ್ತಿತರ ವಸ್ತುಗಳಿಂದ ತಯಾರಾದ ಕೈ ಹೊಲಿಗೆಯ ಹೊದಿಕೆ) ಪುನರ್ವಸತಿ ಕಾರ್ಯಕ್ರಮದ ರೂವಾರಿಯಾದ ಆಕೆಗೆ ನೀಡಿದರು. ಆ ಕೌದಿಯಲ್ಲಿ ಪ್ರತಿಯೊಬ್ಬ ದೇವದಾಸಿಯು ಕೂಡ ಒಂದೊಂದು ಹೊಲಿಗೆಯನ್ನು ಹಾಕಿದ್ದು ಸುಮಾರು 3000 ಹೊಲಿಗೆಗಳಿಂದ ಕೂಡಿದ ಆ ಕೌದಿಯನ್ನು ತುಂಬ ಪ್ರೀತಿಯಿಂದ ಸ್ವೀಕರಿಸಿದ ಲೇಖಕಿ 'ದ ತ್ರೀ ಥೌಸಂಡ್ ಸ್ಟಿಚಸ್' ಎಂಬ ಕಾದಂಬರಿಯನ್ನೇ ಬರೆದರು.

ವರ್ಷದ ಕೆಲ ದಿನಗಳನ್ನು ಬೆಂಗಳೂರಿನ ದೊಡ್ಡ ದೇವಸ್ಥಾನ ಒಂದರಲ್ಲಿ ತರಕಾರಿಗಳನ್ನು ವಿಂಗಡಿಸಿ ಅಡುಗೆ ಮನೆಯಲ್ಲಿ ಶ್ರಮ ವಹಿಸಿ ಕೆಲಸ ಮಾಡುವ ಸೇವಾ ಮನೋಭಾವದ ಮಹಿಳೆ.

ಕರೋನಾ ಸಮಯದಲ್ಲಿ ಅವಿಶ್ರಾಂತವಾಗಿ ತನ್ನ ಮೇಲ್ವಿಚಾರಣೆಯಲ್ಲಿ ಸಂಸ್ಥೆಯ ಪ್ರತಿಷ್ಠಾನದಿಂದ ಕೊಡ ಮಾಡುವ ಅವಶ್ಯಕತೆ ಸಾಮಗ್ರಿಗಳ ಕಿಟ್ ಗಳನ್ನು ತಾನೇ ಖುದ್ದಾಗಿ ಜೋಡಿಸಿದ ಮಾತೃ ಹೃದಯ

ದಶಕಗಳ ಹಿಂದೆಯೇ ಇಂಜಿನಿಯರಿಂಗ್ ಪದವೀಧರೆಯಾಗಿ, ಜಗತ್ತಿನ ಅತಿ ದೊಡ್ಡ ಸಾಫ್ಟವೇರ್ ಕಂಪನಿಯನ್ನು ಹುಟ್ಟು ಹಾಕಿದ ಪತಿಗೆ ಬೆನ್ನೆಲುಬಾಗಿ ನಿಂತ ಪತ್ನಿ.

ತಮ್ಮ ಸಂಸ್ಥೆಯ ಪ್ರತಿಷ್ಠಾನದ ಮೂಲಕ ಇಡೀ ಭಾರತ ದೇಶದ ಹಲವೆಡೆಗಳಲ್ಲಿ ಮತ್ತು ಪಕ್ಕದ ರಾಷ್ಟ್ರಗಳಲ್ಲಿ ಭೂಕಂಪ, ನೆರೆಹಾವಳಿ, ಸುನಾಮಿಯಂತಹ ಪ್ರಾಕೃತಿಕ ಅವಘಡಗಳಲ್ಲಿ ತಮ್ಮ ಮನೆ ಮಠಗಳನ್ನು ಕಳೆದುಕೊಂಡ ಸಾವಿರಾರು ನಿರ್ಗತಿಕರಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿದ ಮಹಾತಾಯಿ.

ಹಲವಾರು ದೇವಸ್ಥಾನಗಳಿಗೆ ಕಾಯಕಲ್ಪ ಮಾಡಿಸಿ, ನಮ್ಮ ಸಂಸ್ಕೃತಿಯನ್ನು ಪುನರುತ್ಥಾನಗೊಳಿಸಿದ ತಾಯಿ. ಶಾಲೆಯೆಂಬ ದೇಗುಲಕ್ಕೆ ಯಾರು ಕರೆದರು ಭೇಟಿ ನೀಡುವ ಹಾರೈಸಿ ಧನ್ಯತೆಯ ಭಾವ ವ್ಯಕ್ತಪಡಿಸುವ ಸ್ಪೂರ್ತಿ ದೇವತೆ.

ಇಂದು ಸಾವಿರಾರು ಮಕ್ಕಳ ಭವ್ಯ ಭವಿಷ್ಯಕ್ಕೆ ದಾರಿ ಮಾಡುವ ಹಲವಾರು ಶಿಕ್ಷಣ ಸಂಸ್ಥೆಗಳಲ್ಲಿ ಮಕ್ಕಳಿಗೆ ಪ್ರೋತ್ಸಾಹ ಮತ್ತು ಮಾರ್ಗದರ್ಶನ ನೀಡುವ ಯಶಸ್ವಿ ವ್ಯಕ್ತಿ.

ಪುಟ್ಟ ಪುಟ್ಟ ಮಕ್ಕಳಿಗಾಗಿ ಕಥೆ ಹೇಳುವ ಅಜ್ಜಿ... ಪದ್ಮವಿಭೂಷಣ, ಪದ್ಮಶ್ರೀ, ದಾನ ಚಿಂತಾಮಣಿ, ಹಲವಾರು ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್..ಅಬ್ಬಬ್ಬಾ ಇನ್ನೂ ಅದೆಷ್ಟೋ ಗರಿಗಳು ಆಕೆಯ ಸಾಧನೆಯ ಕಿರೀಟಕ್ಕಿವೆ. ಅವರೇ ನಮ್ಮ ನಿಮ್ಮೆಲ್ಲರ ಪ್ರೀತಿಯ ಅಕ್ಕರೆಯ,ಸರಳತೆಯ ಸಾಕಾರ ಮೂರ್ತಿ... ಶ್ರೀಮತಿ ಸುಧಾ ಮೂರ್ತಿ ಅಮ್ಮ.

ಥಟ್ಟನೆ ನೋಡಿದರೆ ಪಕ್ಕದ ಮನೆಯ ಅಜ್ಜಿ, ಮುಂದಿನ ಮನೆಯ ಚಿಕ್ಕಮ್ಮ, ದೊಡ್ಡಮ್ಮ ಇರಬಹುದೇನೋ ಎಂಬಂತೆ ತೋರುವ ಸುಧಾ ಅಮ್ಮ ಅತ್ಯಂತ ಸರಳ, ಸುಶಿಕ್ಷಿತ ಮತ್ತು ಭೂಮಿ ತೂಕದ ಹೆಣ್ಣು ಮಗಳು. ಏರಿಳಿತದ ಹಾದಿಯಲ್ಲಿ ಎಂಬ ಪುಸ್ತಕವಂತು ಅಂದಿನ ಜನರ ಜೀವನ ಶೈಲಿಯ, ಬದುಕಿನ ಭಾವನೆಗಳ ಕುರಿತು ಮಾರ್ಮಿಕವಾಗಿ ತಿಳಿಸುತ್ತದೆ.

ಇಂದಿನ ಹಾವೇರಿ ಜಿಲ್ಲೆಯ ಶಿಗ್ಗಾವಿಯಲ್ಲಿ ಜನಿಸಿದ ಸುಧಾ ಮೂರ್ತಿಯವರ ತಂದೆ ವೈದ್ಯರು. ತಾಯಿ ಸದ್ಗೃಹಿಣಿ. ಅಜ್ಜಿಯ ಮನೆಯಾದ ಶಿಗ್ಗಾವಿಯ ಬಳಿ ಕೆಲಕಾಲ ಬಾಲ್ಯವನ್ನು ಕಳೆದ ಸುಧಾ ಅಮ್ಮನವರಿಗೆ ಸಾವಿರಕ್ಕೂ ಹೆಚ್ಚು ವಚನಗಳ ಕಂಠಪಾಠವಾಗಿವೆ. ಅಜ್ಜಿಯ ಅಕ್ಕರೆಯಲ್ಲಿ ಬೆಳೆದ ಸುಧಮ್ಮ ಅಜ್ಜಿಯ ಜೊತೆಗಿನ ಒಡನಾಟದಲ್ಲಿ ಗ್ರಾಮೀಣ ಸಂಸ್ಕೃತಿಯ ಶ್ರೀಮಂತ ಸೊಗಡನ್ನು ಅನುಭವಿಸಿ ಬೆಳೆದಿದ್ದಾರೆ. ಅವರ ಲೇಖನಗಳಲ್ಲಿ ಈ ಛಾಯೆ ಸದಾ ಕಂಡು ಬರುತ್ತದೆ. ಅವರ ಪುಸ್ತಕಗಳಲ್ಲಿ ಅವರ ಬಾಲ್ಯದ ಓದು, ಆಟ ಪಾಠಗಳು, ಬ್ರಾಹ್ಮಣ ಪರಿವಾರದ ತನ್ನ ಅಜ್ಜಿ ಲಿಂಗಾಯತ ಮಠಕ್ಕೆ ಎಡೆ ಕೊಡುವುದು, ಜೈನರೊಂದಿಗಿನ ಒಡನಾಟ, ವಿದ್ಯೆಯ ಮಹತ್ವವನ್ನು ತಿಳಿಸುವ ಪ್ರಜಾ ಮತದಲ್ಲಿ ಪ್ರಕಟವಾದ'ಕಾಶಿ ಯಾತ್ರೆ' ಕಾದಂಬರಿಯ ಘಟನೆಯ ಕಾರಣವಾಗಿ ತನ್ನ ಹೆಜ್ಜೆ ವಿದ್ಯೆ ಕಲಿಸಿ ಆಕೆಯಿಂದ ಗುರುದಕ್ಷಿಣೆ ಪಡೆದ



ಹೃದಯಸ್ಪರ್ಶಿ ಕಥೆ, ಕಟ್ಟಾ ಬ್ರಾಹ್ಮಣ ಪರಿವಾರದ ಅಜ್ಜಿ ಮುಸಲ್ಮಾನ ಪರಿವಾರದ ಹೆಣ್ಣು ಮಗಳಿಗೆ ಹೆರಿಗೆ ಮಾಡಿಸಿದ ಮಾನವೀಯ ಅಂತಃಕರಣದ ಘಟನೆಗಳು, ದೊಡ್ಡವರ ಸಣ್ಣತನಗಳು, ಸಣ್ಣವರ ಹೃದಯ ಶ್ರೀಮಂತಿಕೆಯ ಕಥೆಗಳು, ಮಾನವ ಜೀವನದ ಸಂಕೀರ್ಣ ವಿಷಯಗಳು ಮನ ತಟ್ಟುತ್ತವೆ.

ಮುಂದೆ ಪಿಯುಸಿ ಶಿಕ್ಷಣದ ನಂತರ ಹುಬ್ಬಳ್ಳಿಯ ಪ್ರತಿಷ್ಠಿತ ಬಿ ವಿ ಬಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಏಕೈಕ ಮಹಿಳಾ ವಿದ್ಯಾರ್ಥಿಯಾಗಿ ಓದಿದ ಖ್ಯಾತಿ ಸುಧಾ ಅಮ್ಮನದು. ಮಹಿಳೆಯರು ಈ ವೃತ್ತಿಗೆ ಅಪ್ಲಿಕೇಶನ್ ಹಾಕಬೇಕಿಲ್ಲ ಎಂಬ ಟೆಲ್ಕೊ (ಟಾಟಾ) ಕಂಪನಿಯ ಉದ್ಯೋಗಿಕ ಜಾಹೀರಾತಿಗೆ ಕಟುವಾಗಿ ಟೀಕಿಸಿ ನೀವು ಕೇಳುವ ವೃತ್ತಿ ಕೌಶಲ್ಯಗಳನ್ನು ಹೊಂದಿದ್ದು, ಜೀಪ್ ಚಾಲನೆ ಮಾಡಬಲ್ಲೆ ನನಗೇಕೆ ನೀವು ಉದ್ಯೋಗ ಕೊಡಬಾರದು ಎಂದು ಭಾರತದ ಪ್ರತಿಷ್ಠಿತ ಉದ್ಯಮಿ ಟಾಟಾರವರಿಗೆ ಪೋಸ್ಟ್ ಕಾರ್ಡಿನಲ್ಲಿ ಕಾಗದ ಬರೆದು ಅವರಿಂದ ನೌಕರಿಗೆ ಆಹ್ವಾನ ಪಡೆದವರು ಸುಧಾ ಅಮ್ಮ.

ಆಹ್ವಾನ ಬಂದ ನಂತರ ಸ್ನಾತಕೋತ್ತರ ಪದವಿ ಓದಲು ವಿದೇಶಕ್ಕೆ ಹೋಗುವ ಸನ್ನಾಹದಲ್ಲಿದ್ದ ಸುಧಾ ಅಮ್ಮನವರು ತಂದೆಯ ಸಾತ್ವಿಕ ಆಗ್ರಹ ದ ಮೇರೆಗೆ ಟಾಟಾರವರ ಟೆಲ್ಕೋ ಕಂಪನಿಗೆ ಸೇರಿಕೊಂಡರು.

ಮುಂದೆ ಪುಣೆಯಲ್ಲಿ ನೌಕರಿ ಮಾಡುವಾಗ ಪರಿಚಯವಾದ ಮೈಸೂರು ಮೂಲದ ನಾರಾಯಣಮೂರ್ತಿಯವರನ್ನು ಸುಮಾರು 3 ವರ್ಷಗಳ ಸ್ನೇಹ, ನಂತರ ಪ್ರೀತಿಯನ್ನು ಮುಂದುವರಿಸಿಕೊಂಡು ತಮ್ಮ ಹಿರಿಯರ ಆಶೀರ್ವಾದದೊಂದಿಗೆ, ವಧು ವರರಿಬ್ಬರೂ ತಮ್ಮ ದುಡಿಮೆಯ ಹಣ ಹಾಕಿ ಅತ್ಯಂತ ಕಡಿಮೆ ಖರ್ಚಿನಲ್ಲಿ ವಿವಾಹವಾದರು. ಮುಂದೆ ಪುಣೆಯಲ್ಲಿ ಸಂಸಾರ ಹೂಡಿದರು ದಂಪತಿಗಳು. ಪತ್ನಿ ನೌಕರಿಯಲ್ಲಿ ಮುಂದುವರೆದರೆ ಪತಿ ಇನ್ಫೋಸಿಸ್ ಎಂಬ ಬೃಹತ್ ಸಂಸ್ಥೆಯನ್ನು ಕಟ್ಟುವ ಕಾಯಕದಲ್ಲಿ ನಿರತರಾದರು. ಒಂದೊಮ್ಮೆ ಹಣದ ಅಡಚಣೆ ತಲೆದೋರಿದಾಗ ತಮ್ಮದೇ ಉಳಿತಾಯದ ಹತ್ತು ಸಾವಿರಕ್ಕೂ ಹೆಚ್ಚಿನ ಹಣವನ್ನು (ಅಂದಿನ ಕಾಲಕ್ಕೆ ಅದು ಬಹುದೊಡ್ಡ ಮೊತ್ತ) ನೀಡಿ ಪತಿಯ ಕಾರ್ಯಕ್ಕೆ ಬೆಂಬಲವಾಗಿ ನಿಂತರು. ಮುಂದೆ ಇನ್ಫೋಸಿಸ್ ಎಂಬ ಆಲದ ಮರ ಹೆಮ್ಮರವಾಗಿ ತನ್ನ ಬಿಳಲುಗಳನ್ನು ಎಲ್ಲೆಡೆ ಹರಡಿದಾಗ, ತಮ್ಮ ಮಕ್ಕಳೊಂದಿಗೆ ಬೆಂಗಳೂರಿಗೆ ಬಂದರು ದಂಪತಿಗಳು. ಆಗಲೂ ಕೂಡ ಶ್ರೀಮತಿ ಸುಧಾ ಮೂರ್ತಿಯವರು ಕಾಲೇಜೊಂದರಲ್ಲಿ ಅಧ್ಯಾಪಕಿಯಾಗಿ ಕಾರ್ಯನಿರ್ವಹಿಸುತ್ತಿದ್ದರು.

ಕಣ್ಣು ಕಾಣದ ಅಂಧ ವಿದ್ಯಾರ್ಥಿಗೆ ತನ್ನ ಮಗಳು ಅಕ್ಷತಾ ಪರೀಕ್ಷೆ ಬರೆಯಲು ಸಹಾಯ ಮಾಡಿದ ಘಟನೆ ಸುಧಾ ಮೂರ್ತಿಯವರಿಗೆ ಪಾಠವಾಯಿತೆಂದು ಅವರೇ ಬರೆದಿದ್ದಾರೆ. ಮುಂದೆ ಇನ್ಫೋಸಿಸ್ ಪ್ರತಿಷ್ಠಾನವನ್ನು ಸ್ಥಾಪಿಸಿ ಅದಕ್ಕೆ ಧರ್ಮದರ್ಶಿಯನ್ನಾಗಿ ಸುಧಾ ಮೂರ್ತಿಯವರನ್ನು ನೇಮಕ ಮಾಡಲಾಯಿತು. ಇನ್ಫೋಸಿಸ್ ಪ್ರತಿಷ್ಠಾನದ ಮೂಲಕ ಸಮಾಜ ಸೇವೆಗೆ ತಮ್ಮನ್ನು ತಾವು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡರು. ಒರಿಸ್ಸಾದಲ್ಲಿ ಚಂಡಮಾರುತ, ಮಹಾರಾಷ್ಟ್ರದಲ್ಲಿ ಭೂಕಂಪ,ಈಶಾನ್ಯ ಭಾರತದಲ್ಲಿನ ಪ್ರಾಕೃತಿಕ ಅವಘಡಗಳು, ಪಕ್ಕದ ನೇಪಾಳದಲ್ಲಾದ ತೊಂದರೆಗಳು, ದಕ್ಷಿಣ ಭಾರತದ ಬಹುತೇಕ ರಾಜ್ಯಗಳಲ್ಲಿನ ಪ್ರಾಕೃತಿಕ ತೊಂದರೆಗಳಿಗೆ, ವಿಕೋಪಗಳಿಗೆ ತಮ್ಮ ಸಹಾಯ ಹಸ್ತವನ್ನು ಚಾಚಿದರು. ಸಾವಿರಾರು ಜನರು ಇನ್ಫೋಸಿಸ್ ಪ್ರತಿಷ್ಠಾನದ ನೆರವಿನ ಮೂಲಕ ಮನೆ, ಉದ್ಯೋಗ, ಕುಡಿಯುವ ನೀರು ಮುಂತಾದ ಮೂಲಭೂತ ಸೌಕರ್ಯಗಳನ್ನು ಪಡೆದುಕೊಂಡಿದ್ದಾರೆ. ವಿದ್ಯಾಭ್ಯಾಸಕ್ಕಾಗಿ ಸ್ಕಾಲರಶಿಪ್‌ಗಳನ್ನು ಕೂಡ ಕೊಡ ಮಾಡುವ ಈ ಸಂಸ್ಥೆಯ ಕಾರ್ಯ ಅಮೋಘ ಮತ್ತು ಅದ್ವಿತೀಯ. ಮಕ್ಕಳು ಮುದುಕರು ಯುವಕರು ಎಂದೆನ್ನದೆ ಸಮಾಜದ ಎಲ್ಲ ವರ್ಗದ ಜನರಿಗೆ ಅತ್ಯವಶ್ಯಕವಾದ ಸಹಾಯವನ್ನು ಮಾಡುವಲ್ಲಿ ಇನ್ಫೋಸಿಸ್ ನ ಕಾರ್ಯ ಶ್ಲಾಘನೀಯ. ಕಳೆದ ಎರಡು ಮೂರು ದಶಕಗಳಿಂದ



ರಾತ್ರಿ ಹಗಲೆನ್ನದೆ ತಿಂಗಳಲ್ಲಿ 20ಕ್ಕೂ ಹೆಚ್ಚು ದಿನ ಮನೆಯಿಂದ ದೂರವಿದ್ದು ಪ್ರತಿಷ್ಠಾನದ ಕಾರ್ಯಗಳನ್ನು ನಿರ್ವಹಿಸುವ ಸುಧಾ ಮೂರ್ತಿಯವರ ಸಾಧನೆ ಹಿಮಾಲಯದಷ್ಟು. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬಂತ ಮೇರು ವ್ಯಕ್ತಿತ್ವ ಅಮ್ಮನದು.


ಮಗಳು ಅಕ್ಷತಾಳ ಪತಿ ರಿಷಿ ಸುನಕ್ ಪ್ರಸ್ತುತ ಇಂಗ್ಲೆಂಡ್ ದೇಶದ ಪ್ರಧಾನಮಂತ್ರಿಯಾಗಿದ್ದರೂ ಆ ಕುರಿತು ಯಾವುದೇ ಹೆಗ್ಗಳಿಕೆ ಬಯಸದ, ನನ್ನ ದೇಶಕ್ಕಾಗಿ ನಾನು, ಅವರ ದೇಶಕ್ಕಾಗಿ ಅವರು ಕಾರ್ಯನಿರ್ವಹಿಸಲಿ ಎಂದು ನಮ್ರವಾಗಿ ಹೇಳುತ್ತಾರೆ ಸುಧಾ ಅಮ್ಮ. ಮಗ ರೋಹನ್ ಕೂಡ ಉತ್ತಮ ಸಂಸ್ಕಾರವನ್ನು ಹೊಂದಿದ ವ್ಯಕ್ತಿ.

ಸಾವಿರಾರು ಕೋಟಿ ರೂಗಳ ಷೇರುಗಳನ್ನು ಇನ್ಫೋಸಿಸ್ ನಲ್ಲಿ ಹೊಂದಿದ್ದರು ಇಂದಿಗೂ ಕೂಡ ಬೆಂಗಳೂರಿನಲ್ಲಿ ಎರಡು ಕೋಣೆಗಳ ಮನೆಯೊಂದರಲ್ಲಿ ಈ ದಂಪತಿಗಳು ಸಾಮಾನ್ಯ ಮಧ್ಯಮ ವರ್ಗದವರಂತೆ ವಾಸವಾಗಿದ್ದಾರೆ. ಅತ್ಯಂತ ಶಿಸ್ತಿನ, ಸರಳ ಮತ್ತು ಸಾತ್ವಿಕ ಜೀವನ ಶೈಲಿಯನ್ನು ಹೊಂದಿರುವ ಸುಧಮ್ಮ ಮತ್ತು ನಾರಾಯಣ ಮೂರ್ತಿ ದಂಪತಿಗಳು ನಾಡು–ನುಡಿಯ ಸೇವೆಗೆ ತಮ್ಮನ್ನು ತಾವು ಮುಡುಪಾಗಿಟ್ಟಿದ್ದಾರೆ. 70ರ ಈ ಇಳಿ ವಯಸ್ಸಿನಲ್ಲಿಯೂ ಕೂಡ ದೇಶಾದ್ಯಂತ ಸಂಚರಿಸಿ ಮಕ್ಕಳನ್ನು ಯುವ ಜನತೆಯನ್ನು ಉದ್ದೇಶಿಸಿ ಮಾತನಾಡಿ ಪ್ರೋತ್ಸಾಹಿಸುತ್ತಿರುವ ಈ ದಂಪತಿಗಳು ಇನ್ನೂ ಹಲವಾರು ಕಾಲ ಹೀಗೆ ತಮ್ಮ ಕೈಂಕರ್ಯವನ್ನು ಮುಂದುವರಿಸಲಿ. ಇನ್ನೂ ಹೆಚ್ಚಿನ ಶಕ್ತಿ,ಆರೋಗ್ಯವನ್ನು ಆ ದೇವರು ಕರುಣಿಸಲಿ ಎಂದು ಆಶಿಸುವ.

# ಮೊಬೈಲ್ ಟವರ್ ಹತ್ತಿ ಆತಂಕ ಸೃಷ್ಟಿಸಿದ ಯುವಕ

ಉದಯರಶ್ಮಿ ನ್ಯೂಸ್

ಇಂಡಿ: ಯುವಕನೋರ್ವ ವಿವಸ್ತ್ರವಾಗಿ ಮೊಬೈಲ್ ಟವರ್ ಏರಿರುವ ಘಟನೆ ವಿಜಯಪುರ





ಜಿಲ್ಲೆಯ ಇಂಡಿ ಪಟ್ಟಣದಲ್ಲಿ ಮಂಗಳವಾರ ನಡೆದಿದೆ.

ತಾಲೂಕಿನ ತೆಗ್ಗಿಹಳ್ಳಿ ಗ್ರಾಮದ ಸತೀಶ್ ಚಂದ್ರಶೇಖರ ಕಡಣಿ ಎಂಬುವನು ಪಟ್ಟಣದ ಬಸವೇಶ್ವರ ದಲ್ಲಿರುವ 250 ಫೀಟ್ ಎತ್ತರದ ಬಿಎಸ್ ಎನ್ ಎಲ್ ಟವರ್ ಬೆಳಿಗ್ಗೆ 4 ಘಂಟೆಗೆ ತುತ್ತತುದಿಯವರೆಗೆ ಏರಿದ್ದಾನೆ. ಟವರ್ ತುದಿಯ ಮೇಲೆ ಹತ್ತಿ ಅಪಾಯಕಾರಿಯಾಗಿದ್ದಾನೆ. ಯುವಕ ಟವರ್ ಮೇಲಿಂದ ಆಯತಪ್ಪಿ ಬಿದ್ದರೆ ಅನಾಹುತಕ್ಕೀಡುವ ಸಂಭವ ಇತ್ತು. ಅದಕ್ಕಾಗಿ ತಕ್ಷಣವೇ ಸ್ಥಳಕ್ಕೆ ಅಗ್ನಿಶಾಮಕ ಪೊಲೀಸರು ಭೇಟಿ ನೀಡಿ, ಸತೀಶನನ್ನು ಮನವೋಲಿಸಿ ಕೆಳಗೆ ಇಳಿಸುವ ಕೆಲಸ ಮಾಡಿದ್ದಾರೆ. ಆತನನ್ನು ವಿಚಾರಿಸಿದಾಗ ನಮ್ಮೂರಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ ಎಂದು ಹೇಳುತ್ತಾನೆ.

ಈ ಹಿಂದೆಯೂ ಈತನು ಸಿಂದಗಿ ತಾಲ್ಲೂಕಿನ ಬಳಗಾನೂರ ಗ್ರಾಮದಲ್ಲಿ ಹಾಗೂ ಚಾಂದಕವಠೆ ಗ್ರಾಮದಲ್ಲಿ ಟವರ್ ಹತ್ತಿ ಹುಚ್ಚಾಟ ಮೆರೆದಿದ್ದನೆನ್ನಲಾಗಿದೆ.

ಈ ಸಂದರ್ಭದಲ್ಲಿ ಅಗ್ನಿಶಾಮಕ ಸಹಾಯಕ ಠಾಣಾ ಅಧಿಕಾರಿ ದೇವಧಾನಮ್ಮ ಪಿ.ಎಚ್, ಚಾಲಕ ಮಲ್ಲು ಗೋಟ್ಯಾಳ,ಸಿಬ್ಬಂದಿ ಮಾರುತಿ ರಾಠೋಡ, ಮಹಾದೇವ ಮಾದರ, ಶರಣು ಹೊನವಾಡ, ಪ್ರಕಾಶ್ ಬಿರಾದಾರ, ಮಹ್ಮದ ಅಲಿ ಬಂಥನಾಳ ಇದ್ದರು.


ಇಂಡಿ ಶಹರ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಘಟನೆ ಸಂಭವಿಸಿದೆ.

# ಸ್ವಾಗತ ಸಮಿತಿ ಅಧ್ಯಕ್ಷರಾಗಿ ವಿ.ಕೆ.ಗುರುಮಠ ಆಯ್ಕೆ

ಉದಯರಶ್ಮಿ ನ್ಯೂಸ್

ಗದಗ: ಉತ್ತರ ಕರ್ನಾಟಕ ಕಲಾವಿದರ ಹಾಗೂ ಕಲಾಪೋಷಕರ ಸಂಘಟನೆಯಾದ ಗದುಗಿನ ಪ್ರತಿಷ್ಠಿತ ಸಾಂಸ್ಕೃತಿಕ ಸಂಘಟನೆಯಾದ ಕಲಾ ವಿಕಾಸ ಪರಿಷತ್ತಿನ, ರಾಷ್ಟ್ರೀಯ ಮಟ್ಟದ ಕಲಾ ವಿಕಾಸ ಉತ್ಸವ–2024 ಸಮಾರಂಭದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ನಗರದ ಪ್ರಥಮ ದರ್ಜೆ ಗುತ್ತಿಗೆದಾರ ಮತ್ತು ಸಮಾಜ ಸೇವಕ ವಿ. ಕೆ. ಗುರುಮಠ ಇವರನ್ನು ಪರಿಷತ್‌ನ ಗೃಹ ಕಚೇರಿಯಲ್ಲಿ ನಡೆದ ಕಾರ್ಯಕಾರಣಿ ಸಮಿತಿಯ ಸಭೆಯಲ್ಲಿ ಸರ್ವ ಸದಸ್ಯರ ಮತ್ತು ಪರಿಷತ್‌ನ ಹಿತೈಶಿಗಳ ಸಭೆಯಲ್ಲಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು ಎಂದು ಪರಿಷತ್ ಸಂಸ್ಥಾಪಕ ಸಿ. ಕೆ. ಹೆಚ್.ಶಾಸ್ತ್ರೀ (ಕಡಣಿ) ಇವರು ತಿಳಿಸಿದ್ದಾರೆ.

ಕಲಾ ವಿಕಾಸ ಪರಿಷತ್ತು ಶುದ್ಧ ಶಾಸ್ತ್ರೀಯ ಸಂಗೀತಕ್ಕಾಗಿ ಸಮರ್ಪಿಸಿಕೊಂಡ ಸಂಸ್ಥೆಯಾಗಿದ್ದು, ಈ ಸಂಸ್ಥೆಯು ಅವಳಿ ನಗರದಲ್ಲಿ ಮಾತ್ರವಲ್ಲದೆ ದೇಶದ ಅನೇಕ ರಾಜ್ಯಗಳಲ್ಲಿ ಬಾಲ, ಯುವ ಮತ್ತು ಹಿರಿಯ ಕಲಾವಿದರಿಗಾಗಿ ಸಂಗೀತ ನೃತ್ಯ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ದೇಶದ ಕಲಾ ದಿಗ್ಗಜರ ಚಿರಪ–ರಿಚಿತ ಸಂಸ್ಥೆಯಾಗಿದೆ. ಅವಳಿ ನಗರದಲ್ಲಿ ಸಂಸ್ಕೃತಿ ಸಂಭ್ರಮ, ಕಲಾ ವಿಕಾಸ ಉತ್ಸವ, ಭೀಮಸೇನ್ ಜೋಶಿ ಮ್ಯೂಜಿಕ್ ಫೆಸ್ಟಿವಲ್ ಮೊದಲಾದ ಸಂಗೀತ ಸಾಹಿತ್ಯ ಕಾರ್ಯಕ್ರಮ ಏರ್ಪಡಿ ದೇಶ ವಿದೇಶದ ಕಲಾವಿದರಿಗೆ ವೇದಿಕೆ ನೀಡಿದ ನಗರದ ಪ್ರತಿಷ್ಠಿತ ಏಕೈಕ ಸಂಸ್ಥೆಯಾಗಿದೆ. ಕರೋನ ಕಾಲಘಟ್ಟದಿಂದ ಅವಳಿ ನಗರದಲ್ಲಿ ದೊಡ್ಡ ಉತ್ಸವಗಳು ಹಮ್ಮಿಕೊಳ್ಳಲು ಪರಿಷತ್‌ಗೆ ಸಾಧ್ಯವಾಗಿರಲಿಲ್ಲ ಮತ್ತೆ ಹಿಂದಿನ ಗತವೈಭವಕ್ಕೆ ಮರಳುವ ಉದ್ದೇಶದಿಂದ ಮತ್ತು ಪರಿಷತ್‌ನ ರಜತ ಮಹೋತ್ಸವಕ್ಕೆ ಪೂರ್ವಸಿದ್ಧತೆ ಮಾಡಿಕೊಳ್ಳುವ ಯೋಜನೆಯಲ್ಲಿ ಈ ಉತ್ಸವದ ಹಮ್ಮಿಕೊಳ್ಳಲಾಗುತ್ತಿದೆ



ಎಂದು ಸಭೆಗೆ ವಿವರಿಸಿದರು.

ಈ ಹಿಂದಿನ ಉತ್ಸವಗಳಲ್ಲಿ ವಿಶ್ವನಾಥ್ ರಾಮನಕೊಪ್ಪ, ಡಾಕ್ಟರ್ ಜಿ ಬಿ ಪಾಟೀಲ್, ವಿಜಯ್ ಕುಮಾರ್ ಗಡ್ಡಿ, ಎಚ್. ಎಸ್.ಶಿವನಗೌಡರ್, ಸಿರಾಜ್ ಬಳ್ಳಾರಿ, ಮಂಜುನಾಥ್ ರೆಡ್ಡಿ, ಡಾ. ಶೇಖರ ಸಜ್ಜನರ್ ಮೊದಲಾದ ಸಾಂಸ್ಕೃತಿಕ ಚಿಂತಕರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಕಲಾವಿಕಾಸ ಪರಿಷತ್ತಿನ ಕಾರ್ಯಕ್ರಮಗಳನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಲ್ಲಿ ಪ್ರೋತ್ಸಾಹಿಸಿದ್ದಾರೆ. ಎಂದು ಸಭೆಯಲ್ಲಿ ಶಾಸ್ತ್ರೀಗಳು ನೆನಪಿಸಿಕೊಂಡರು.

ಏಪ್ರಿಲ್ ತಿಂಗಳ ಕೊನೆಯ ವಾರದಲ್ಲಿ ಅಥವಾ ಮೇ ಮೊದಲ ವಾರದಲ್ಲಿ ಹಮ್ಮಿಕೊಳ್ಳುವ ಈ ಎರಡು ದಿನದ ಉತ್ಸವಕ್ಕೆ ಸ್ಥಳೀಯ ಸಾಂಸ್ಕೃತಿಕ ಸಂಘಟನೆಗಳ ಮತ್ತು ಸಂಗೀತ ನೃತ್ಯ ಕಲಾಪ್ರೀಯರ ಸಹಕಾರ ಪಡೆಯಲಾಗುವುದು ಎಂದರು.

ಮುಂದಿನ ದಿನಗಳಲ್ಲಿ ವಿ. ಕೆ. ಗುರುಮಠ ಅವರ ಅಧ್ಯಕ್ಷತೆಯಲ್ಲಿ ಅವರ ಆಪ್ತಮಿತ್ರರ ಸಂಘ ಸಂಸ್ಥೆಗಳ ಸಭೆ ಕರೆದು ಪೂರ್ಣ ಪ್ರಮಾಣದ ಸ್ವಾಗತ ಸಮಿತಿ ರಚಿಸಲಾಗುವುದು ಎಂದು ಹೇಳಿದರು.

ಪರಿಷತ್‌ನ ಹಿತೈಷಿ ವಿಭೂತಿ ಮಾಸಪತ್ರಿಕೆಯ ಸಂಪಾದಕ ಸಾಹಿತಿ ಅಂದಾನೆಪ್ಪ ವಿಭೂತಿ ನಿವೃತ್ತ ಚಿತ್ರಕಲಾ ಶಿಕ್ಷಕ, ಖ್ಯಾತ ಕಲಾವಿದ ಶಿವಪ್ಪ ಬೆನಕಣ್ಣವರ, ರುದ್ರೇಶ ಕೊರವರ್, ಪ್ರದೀಪ ನರ್ತಿ, ಎಫ್.ಎ. ಹಿರೇಮಠ ಮತ್ತು ಸರ್ವ ಸದಸ್ಯರು ಉಪಸ್ಥಿತರಿದ್ದು ತಮ್ಮ ಅನಿಸಿಕೆ ಅಭಿಪ್ರಾಯಗಳನ್ನು ಹಂಚಿಕೊಂಡರು.

# ಚಡಚಣ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ರಚನೆ



ಉದಯರಶ್ಮಿ ನ್ಯೂಸ್

ಚಡಚಣ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಸಂಸ್ಥಾಪನೆ ದಿನಾಚರಣೆ ಅಂಗವಾಗಿ ಸಮಿತಿಯ ಕಾರ್ಯಾಲಯದಲ್ಲಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಚಡಚಣ ತಾಲೂಕು ಘಟಕದ ಸಮಿತಿಯನ್ನು ರಚಿಸಲಾಯಿತು ಎಂದು ಜಿಲ್ಲಾ ಘಟಕದ ಅಧ್ಯಕ್ಷ ಜಿ.ಎಸ್ ಕಾಂಬಳೆ ತಿಳಿಸಿದ್ದಾರೆ

ಗೌರವಾಧ್ಯಕ್ಷರಾಗಿ ಉಮರಾಣಿ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಅರವಿಂದ ಡೋಣೂರ, ಅಧ್ಯಕ್ಷರಾಗಿ ಹತ್ತಳ್ಳಿ ಸರ್ಕಾರಿ ಪ್ರೌಢಶಾಲೆ ವಿಜ್ಞಾನ ಶಿಕ್ಷಕ ಪ್ರದೀಪ ಮಧಬಾವಿ, ಉಪಾಧ್ಯಕ್ಷರಾಗಿ ಶಿರನಾಳ ಸರ್ಕಾರಿ ಎಚ್.ಪಿ.ಎಸ್ ಶಾಲೆಯ ಶಿಕ್ಷಕರಾದ ಸುರೇಶ ಶಿವಶರಣ ಆಯ್ಕೆ ಮಾಡಲಾಯಿತು.

ಕಾರ್ಯದರ್ಶಿಗಳು ವಿಜ್ಞಾನ ಶಿಕ್ಷಕರಾದ ರಾಜೇಶ ಬಳಿಗಾರ, ಸಹ ಕಾರ್ಯದರ್ಶಿಗಳು ದೈಹಿಕ ಶಿಕ್ಷಕರಾದ ಮಾಂತಕ್ಕ ರಾಂಪುರ, ಖಜಾಂಚಿ ವಿಜ್ಞಾನ ಶಿಕ್ಷಕರಾದ ಮೊಕಾಶಿ, ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಪತ್ರಕರ್ತರಾದ ಶಿವಾನಂದ ಶಿವಶರಣ ಹಾಗೂ ಹಸಶ್ಯಾ ಮಕಾನದಾರ, ಶಿಕ್ಷಕರಾದ ಎಸ್ ಎಂ ಹದಿಮೂರ, ಮಾಳಪ್ಪ ವಾಗ್ಮೊರೆ, ರಾಮಚಂದ್ರ ಸುಣಗಾರ, ಜಿ ಎಸ್ ಜಂಗಮಶೆಟ್ಟಿ, ಆಸಿಫ್ ಚಟ್ಟರಕಿ, ಪಿ ಬಿ ಕುರ್ಲೆ, ಕುಮಾರಿ ಬಿ ಎಸ್ ಮದಭಾವಿ, ಎಂ ಜೆ ಚಿಂಚೋಳಿ, ಶ್ರೀಮತಿ ಎಂ ಎಸ್ ಬಿರಾದಾರ ಆಯ್ಕೆಯಾಗಿದ್ದಾರೆ ಎಂದು ಜಿಲ್ಲಾ ಕಾರ್ಯದರ್ಶಿ ರಮೇಶ ನಾಯಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದೇಶದ ಕಾನೂನನ್ನು ನಾವು ಗೌರವಿಸಬೇಕು :ಬಶೀರಅಹ್ಮದ್

ಉದಯರಶ್ಮಿ ನ್ಯೂಸ್



ಮುದ್ದೇಬಿಹಾಳ: ಈ ದೇಶದಲ್ಲಿ ಹುಟ್ಟಿದ ಮೇಲೆ ನಾವು ಈ ದೇಶವನ್ನು ನಾವು ಪ್ರೀತಿಸಬೇಕು. ಈ ದೇಶದ ಕಾನೂನನ್ನು ನಾವು ಗೌರವಿಸಬೇಕು. ಈ ದೇಶದ ಸಂವಿಧಾನವನ್ನು ನಾವು ಸ್ವೀಕರಿಸಬೇಕು. ಎಲ್ಲ ಸಮಾಜದವರ ಜೊತೆ ನಾವು ಪ್ರೀತಿ ವಿಶ್ವಾಸದಿಂದ ಬಾಳಬೇಕು. ಇದನ್ನ ಪ್ರತಿಯೊಬ್ಬ ಮುಸ್ಲಿಂ ಅರಿತುಕೊಂಡು ಜಾಗೃತರಾಗಬೇಕಾಗಿದೆ ಎಂದು ಕರ್ನಾಟಕ ಮುಸ್ಲಿಂ ಸಂಘದ ರಾಜ್ಯಾಧ್ಯಕ್ಷ ಎಲ್. ಎಸ್.ಬಶೀರಅಹಮದ್ ಹೇಳಿದರು.

ಪಟ್ಟಣದ ಮಳಿಗೆಯೊಂದರಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕೆಲವು ಸಂದರ್ಭಗಳಲ್ಲಿ ನಮ್ಮ ಮೇಲೆ ಕೆಟ್ಟ ಪರಿಣಾಮಗಳನ್ನು ಹಾಕಿ ಬೇರೆಯವರು ಅಧಿಕಾರದ ಗುರಿ ಮುಟ್ಟಲು ಪ್ರಯತ್ನಿಸುತ್ತಿದ್ದಾರೆ. ಅದಕ್ಕೆ ನಾವು ಅವಕಾಶ ಕೊಡದೇ ದೇಶದ ಎಲ್ಲ ಸಮಾಜ ಬಾಂಧವರ ಜೊತೆ ಪ್ರೀತಿ, ವಿಶ್ವಾಸದಿಂದ ಸೌಹಾರ್ದಯುತವಾಗಿ ಜೀವನ ಮಾಡಬೇಕಾಗಿರುವುದು ಅನಿವಾರ್ಯವಾಗಿದೆ. ಈವರೆಗೆ ನಾವು ಸೌಹಾರ್ದಯುತವಾಗಿ ಬಂದರೂ ಕೆಲವು ರಾಜಕೀಯ ಹಿತಾಸಕ್ತಿಗಳು ನಮ್ಮ ಮೇಲೆ ಆಗಾಗ ಕೆಟ್ಟ ಪರಿಣಾಮಗಳನ್ನು ಬೀರುತ್ತಿರುವುದರಿಂದ ಪ್ರತಿಯೊಬ್ಬ ಮುಸ್ಲಿಂ ಸಮಾಜದ ಬಾಂಧವರು ನಮ್ಮ ಸಲಹೆಯ ಪಾಲನೆ ಮಾಡಬೇಕಾಗಿದೆ ಎಂದರು.

ಇಲ್ಲಿಯವರೆಗೆ ನಮ್ಮನ್ನ ಆಳುವ ಸರ್ಕಾರಗಳು ಮುಸ್ಲೀಮರಿಂದ ಅಧಿಕಾರಕ್ಕೆ ಬರುತ್ತಿವೆ. ಆದರೆ ಅವರ ಹಕ್ಕುಗಳನ್ನು ಸಂರಕ್ಷಣೆ ಮಾಡುವಲ್ಲಿ ವಿಫಲರಾಗುತ್ತಿದ್ದಾರೆ. 2023 ರ ವಿಧಾನಸಭಾ ಚುನಾವಣೆಯಲ್ಲಿ ನಮ್ಮ ಸಮಾಜ ರಾಜ್ಯದಲ್ಲಿ ಕಾಂಗ್ರೇಸ್ ಸರ್ಕಾರ ಅಡಳಿತಕ್ಕೆ ಬರಲು ಶೇ88 ರಷ್ಟು ಮತದಾನ ಮಾಡುವ ಮೂಲಕ ಕಾಂಗ್ರೇಸ್ ಪಕ್ಷಕ್ಕೆ ಬೆಂಬಲಿಸಿದೆ. ಆದರೆ ಈ ಸರ್ಕಾರಕ್ಕೆ ನಮ್ಮ ಹಕ್ಕನ್ನು ನಮಗೆ ಕೊಡಿ ಎಂದು ಕೇಳುವ ಪರಿಸ್ಥಿತಿಗೆ ತಂದಿಟ್ಟಿದೆ. ಹಾಗಾಗಿ ಚುನಾವಣೆ ನಂತರ ಸುಮಾರು 25 ಸಾವಿರ ನಮ್ಮ ಸಮಾಜ ಬಾಂಧವರನ್ನು ಒಂದೆಡೆ ಸೇರಿಸಿ ಮಹಾ ಸಮ್ಮೇಳನ ಮಾಡಲು ತೀರ್ಮಾನಿಸಿದ್ದೇವೆ ಎಂದರು.

ಬಿಜೆಪಿ ಅಧಿಕಾರದ ಅವಧಿಯಲ್ಲಿ ನಮ್ಮ ಸಮಾಜದ ಯುವಕರ ಮೇಲೆ, ಸಂಘ ಸಂಸ್ಥೆಗಳ ಪದಾಧಿಕಾ–ರಿಗಳ ಮೇಲೆ ಸುಳ್ಳು ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಿದೆ. ಆ ಎಲ್ಲ ಪ್ರಕರಣಗಳನ್ನು ಕೂಡಲೇ ಹಿಂಪಡೆಯಬೇಕೆಂಬುದು ನಮ್ಮ ಸಂಘದ ಆಗ್ರಹವಾಗಿದೆ ಎಂದರು. ಈ ವೇಳೆ ಯುಸೂಫ ನಾಯ್ಕೋಡಿ, ಸಿ.ಎನ್.ಗೋವಿಂದಪ್ಪ, ಮಹೆಬೂಬ ಕುಂಟೋಜಿ, ಗೋವಿಂದರಾಜ ಅರಮನಿ, ಕೆ.ಎಲ್.ನಧಾಫ್ ಜಿಲ್ಲಾಧ್ಯಕ್ಷ, ಎಲ್.ಕೆ.ನದಾಫ್, ಎಂ.ಸಿ.ವ್ಯಾಗೇರಿ, ಅಮೀನಸಾ ಮುಲ್ಲಾ ಇದ್ದರು.

# ಉಪಾಧ್ಯಕ್ಷರಾಗಿ ಕಲ್ಮೇಶ ಬುದ್ನಿ ನೇಮಕ

ಉದಯರಶ್ಮಿ ನ್ಯೂಸ್



ದೇವರಹಿಪ್ಪರಗಿ: ಪಟ್ಟಣದ ಬಿಜೆಪಿ ಸಕ್ರಿಯ ಕಾರ್ಯಕರ್ತ ಕಲ್ಮೇಶ ಬುದ್ನಿ ಇವರನ್ನು ದೇವರಹಿಪ್ಪರಗಿ ಮಂಡಲ ಬಿಜೆಪಿ ಯುವ ಮೋರ್ಚಾ ಉಪಾಧ್ಯಕ್ಷರಾಗಿ ನೇಮಕಗೊಂಡಿದ್ದಾರೆ.

ಪಕ್ಷ ಸಂಘಟನೆಯಲ್ಲಿ ನಿರತನಾಗಿರುವ ಯುವ ಕಾರ್ಯಕರ್ತನನ್ನು ಮಾಜಿ ಶಾಸಕ ಸೋಮನಗೌಡ ಪಾಟೀಲ(ಸಾಸನೂರ), ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಬಸವರಾಜ ಹೂಗಾರ ಇವರ ಶಿಫಾರಸ್ಸಿನ ಮೇರೆಗೆ ನೇಮಕ ಮಾಡಲಾಗಿದೆ ಎಂದು ದೇವರಹಿಪ್ಪರಗಿ ಮಂಡಲ ಬಿಜೆಪಿ ಪ್ರಕಟಣೆ ತಿಳಿಸಿದೆ.

# ವಿಜಯಶ್ರೀಗೆ ಪ್ರಶಸ್ತಿ ಗೌರವ

ಉದಯರಶ್ಮಿ ನ್ಯೂಸ್



ದೇವರಹಿಪ್ಪರಗಿ: ಪಟ್ಟಣದ ವಿಜಯಶ್ರೀ ತೆಲಗ ಇವರಿಗೆ ಉತ್ತಮ ಸೇವೆ ಸಲ್ಲಿಸಿದ ಅಂಗನವಾಡಿ ಕಾರ್ಯಕರ್ತೆ ಎಂದು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತಾಲ್ಲೂಕು ಆಡಳಿತ, ತಾಲ್ಲೂಕು ಕಾನೂನು ಸೇವಾ ಸಮಿತಿ, ತಾಲ್ಲೂಕು ಪಂಚಾಯಿತಿ ಅಂಗನವಾಡಿ ನೌಕರರ ಸಂಘಟನೆಗಳು ಹಾಗೂ ಶಿಶು ಅಭಿವೃದ್ಧಿ ಯೋಜನೆ ಸಿಂದಗಿ ಇವರ ಸಹಯೋಗದಲ್ಲಿ ಇತ್ತೀಚಿಗೆ ಜರುಗಿದ 2024ರ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಈ ಪ್ರಶಸ್ತಿ ನೀಡಲಾಯಿತು.

# ಚುನಾವಣೆ: ಸೋಷಿಯಲ್ ಮೀಡಿಯಾ ಮೇಲಿನ ನಿಯಂತ್ರಣಗಳು




ಉದಯರಶ್ಮಿ ದಿನಪತ್ರಿಕೆ

ದೇಶದ ಚುನಾವಣೆ ಘೋಷಣೆಯಾಗಿದೆ. ಚುನಾವಣಾ ಆಯೋಗ ಅನೇಕ ನೀತಿ ನಿಯಮಗಳನ್ನು ಜಾರಿ ಮಾಡಿದೆ. ಅವುಗಳಲ್ಲಿ ಸೋಷಿಯಲ್ ಮೀಡಿಯಾಗಳ ಮೇಲಿನ ಕೆಲವು ನಿಯಂತ್ರಣಗಳು ಸೇರಿವೆ..

ಮೂಲಭೂತವಾಗಿ ಭಾರತ ಪ್ರಜಾಪ್ರಭುತ್ವ ವ್ಯವಸ್ಥೆಯ ಗಣರಾಜ್ಯ. ಅಭಿವ್ಯಕ್ತಿ ಸ್ವಾತಂತ್ರ್ಯ ಇಲ್ಲಿನ ಹಕ್ಕು..

ಕೇವಲ ಚುನಾವಣಾ ಸಮಯದಲ್ಲಿ ಮಾತ್ರವಲ್ಲ ಎಲ್ಲಾ ಕಾಲದಲ್ಲೂ, ಎಲ್ಲಾ ಸಂದರ್ಭದಲ್ಲಿಯೂ ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಇನ್ನೊಬ್ಬರ ವೈಯಕ್ತಿಕ ನಿಂದನೆ, ಜಾತಿ ಧರ್ಮ ಭಾಷೆಗಳ ಅವಹೇಳನ, ಕೆಟ್ಟ ಪದಗಳ ಪ್ರಯೋಗ, ಅನೈತಿ–ಕ ಚಟುವಟಿಕೆ, ಕಾನೂನು ಬಾಹಿರ ವ್ಯವಹಾರಗಳನ್ನು ನಿರ್ಬಂಧಿಸಲಾಗಿದೆ. ಇದೇನು ಹೊಸ ನಿಯಮವಲ್ಲ..

ಚುನಾವಣಾ ಸಂದರ್ಭದಲ್ಲಿ ವಿಶೇಷವಾಗಿ ಕೆಲವು ಸೂಚನೆ ಕೊಡಲಾಗಿದೆ. ಅದರಲ್ಲಿ ಮುಖ್ಯವಾಗಿ..


ಸಾಮಾಜಿಕ ಜಾಲತಾಣಗಳಲ್ಲಿ ಅಭ್ಯರ್ಥಿ ಅಥವಾ ಪಕ್ಷದ ಪರ ಪ್ರಚಾರ ಮಾಡಬಾರದು. ಇದು ಸಂಪೂರ್ಣ ನಿಷೇಧವಲ್ಲ. ಪ್ರಚಾರ ಮಾಡಬೇಕಾದರೆ ಅನುಮತಿ ಪಡೆದಿರಬೇಕು. ಏಕೆಂದರೆ ಚುನಾವಣಾ ಖರ್ಚು ವೆಚ್ಚದ ಮೇಲೆ ಮಿತಿ ಇರುವುದ–ರಿಂದ ಇಲ್ಲಿಯ ಪ್ರಚಾರದ ಲೆಕ್ಕ ಸಿಗುವುದಿಲ್ಲ ಎಂದು ಒಂದು ಆಲೋಚನೆ ಅಷ್ಟೆ. ಅನುಮತಿ ಪಡೆದು ಹಣದ ಲೆಕ್ಕ ತೋರಿಸಿ ಪ್ರಚಾರ ಮಾಡಬಹುದು. ಏಕೆಂದರೆ ಸಾಮಾನ್ಯ ಸಂಧರ್ಭದಲ್ಲಿ ಯಾವುದೇ ಮಾಧ್ಯಮಗಳ ಅಧೀಕೃತ ಪ್ರಚಾರವನ್ನು ತಡೆಯುವುದು ಮೂಲಭೂತ ಹಕ್ಕಿನ ಉಲ್ಲಂಘನೆಯಾಗುತ್ತದೆ..

ಮತ್ತೆ, ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಗಳು ಹೆಚ್ಚಾಗಿ ಹರಿದಾಡುವುದರಿಂದ ಮತ್ತು ಅದಕ್ಕೆ ಒಂದು ನಿರ್ದಿಷ್ಟ ಜವಾಬ್ದಾರಿ ಮತ್ತು ಸತ್ಯದ ಅಧೀಕೃತ ಖಚಿತತೆಯ ಮಾನದಂಡಗಳು ಇಲ್ಲದಿರುವುದರಿಂದ, ಭಾರತದಂತ ಬೃಹತ್ ದೇಶದಲ್ಲಿ ಗಾಳಿ ಸುದ್ದಿಗಳು ಬಹುಬೇಗ ಹರಡುವುದು ಮತ್ತು ಜನರು ಅದನ್ನು ನಂಬುವ ಸಾಧ್ಯತೆ ಇರುವುದ–ರಿಂದ ಅದರ ದುಷ್ಪರಿಣಾಮ ತಡೆಯಲು ಅನುಮತಿಯನ್ನು ಕಡ್ಡಾಯ ಗೊಳಿಸಲಾಗಿದೆ..

ಇದನ್ನೇ ಕೆಲವು ಗೆಳೆಯರು ತಪ್ಪಾಗಿ ಭಾವಿಸಿ ಕಳವಳಗೊಂಡಿದ್ದಾರೆ. ಭಾರತದ ಪ್ರಜೆಗಳೆಲ್ಲ ಕ್ರಿಮಿನಲ್ ಗಳಲ್ಲ. ಪ್ರಜಾಪ್ರಭುತ್ವದ ಮೂಲ ಗಟ್ಟಿತನ ಉಳಿದಿರುವುದೇ ಅದರ ಭಿನ್ನ ಧ್ವನಿಗಳಿಂದಾಗಿ. ಇದೇನು ಕಮ್ಯುನಿಸ್ಟ್ ಅಥವಾ ಸರ್ವಾಧಿಕಾರಿ ದೇಶವಲ್ಲ..

ಪತ್ರಿಕೆ ಮತ್ತು ಟಿವಿ ಮಾಧ್ಯಮಗಳಿಗೆ ಇರುವಷ್ಟು ಸ್ವಾತಂತ್ರ್ಯ ಸೋಷಿಯಲ್ ಮೀಡಿಯಾಗಳಿಗೂ ಇದೆ. ಅದೇ–ರೀತಿ ಕಾನೂನು ಬಾಹಿರ ವಿಷಯ ಪ್ರಕಟಿಸಿದರೆ ಶಿಕ್ಷೆಗೆ ಗುರಿ ಮಾಡುವ ಅಧಿಕಾರವೂ ಆಡಳಿತಕ್ಕೆ ಇದೆ..

ಸೋಷಿಯಲ್ ಮೀಡಿಯಾ ಇಂದು ಒಂದು ಪ್ರಬಲ ಮಾಧ್ಯಮವಾಗಿ ಬೆಳೆದಿದೆ. ಭಾರತದ ಶಾಂತಿ ಸಾಮರಸ್ಯ ಅಭಿವೃದ್ಧಿ ಮತ್ತು ವೈವಿಧ್ಯತೆಯನ್ನು ಉಳಿಸಿಕೊಳ್ಳಲು ಒಂದು ಜನಾಭಿಪ್ರಾಯ ಮೂಡಿಸುವುದು ಅವಶ್ಯವಲ್ಲವೆ..






ಅಧಿಕಾರಿಗಳು, ರಾಜ–ಕೀಯ ಪಕ್ಷಗಳು, ಅತ್ಯಂತ ನೀಚ ಭ್ರಷ್ಟಾಚಾರಗಳಲ್ಲಿ ತೊಡಗಿ, ಅಕ್ರಮಗಳ ಮುಖಾಂತರ ಚುನಾವಣೆ ಗೆದ್ದು ಬಡವರ ರಕ್ತ ಹೀರುತ್ತಿರುವಾಗ ನಾವು ಕೈಕಟ್ಟಿ, ಬಾಯಿ ಮುಚ್ಚಿ ಕುಳಿತುಕೊಳ್ಳಬೇಕೆ..

ಕನಿಷ್ಠ ಒಂದು ಒಳ್ಳೆಯ ಆಡಳಿತಾತ್ಮಕ ವ್ಯವಸ್ಥೆ ರೂಪಿಸಲು, ಜನರ ಮೇಲೆ ಸಾಮೂಹಿಕ ಪರಿಣಾಮ ಬೀರಿ ಜನಾಭಿಪ್ರಾಯ ರೂಪಿಸಲು ಸಣ್ಣ ಮಟ್ಟದ ಪ್ರಯತ್ನ ಮಾಡಬಾರದೆ..

ಹೌದು, ಕೆಲವು ಉಡ–ಾಫೆ ಮನೋಭಾವದ ಜನಗಳು ಯಾವುದೋ ವ್ಯಕ್ತಿ ಅಥವಾ ಪಕ್ಷ ಅಥವಾ ಜಾತಿ ಅಥ–'ವಾ ಧರ್ಮ ಅಥವಾ ಹಣಕ್ಕೆ ತಮ್ಮನ್ನು ಮಾರಿಕೊಂಡು ಅಸಭ್ಯ ಭಾಷೆಯಿಂದ ಇತರರನ್ನು ಕೆಟ್ಟ ಕೊಳಕ ಭಾಷೆಯಲ್ಲಿ ನಿಂದಿಸಿ ಸಮಾಜದ ಸ್ವಾಸ್ಥ್ಯ ಕೆಡಿಸುವುದನ್ನು ನೋಡುತ್ತಿದ್ದೇವೆ. ಇದು ಅಪರಾಧ..

ಆದರೆ ಇಂತಹ ಅಭ್ಯರ್ಥಿ ಉತ್ತಮ, ಇಂತಹ ಪಕ್ಷ ಪರವಾಗಿಲ್ಲ ಅಥವಾ ಇದು ಯಾವುದೂ ಸರಿ ಇಲ್ಲ ಬೇರೆ ವ್ಯವಸ್ಥೆಯ ಬಗ್ಗೆ ಪರಿಶೀಲಿಸೋಣ ಎಂಬ ಅಭಿಪ್ರಾಯ ವ್ಯಕ್ತಪಡಿಸಲೂ ಸಾಧ್ಯವಿಲ್ಲ ಎಂದಾದರೆ ಅದು ಪ್ರಜಾಪ್ರಭುತ್ವ ನಾಶದ ಲಕ್ಷಣ ಎಂದೇ ಭಾವಿಸಬೇಕಾಗುತ್ತದೆ..

ಕೆಟ್ಟದ್ದನ್ನು ನಿಯಂತ್ರಿಸುವ ಭರದಲ್ಲಿ ಒಳ್ಳೆಯವರನ್ನು ಮೂಕರಾಗಿಸುವುದು ದುರಂತ. ಇದರ ಲಾಭ ಪಡೆಯುವ ದುಷ್ಟರು ನಮ್ಮನ್ನು ಸದಾಕಾಲವು ಶೋಷಿಸುತ್ತಲೇ ಇರುತ್ತಾರೆ. ಬಂಧನದ ಭೀತಿ ಸೃಷ್ಟಿಸಿ ನಮ್ಮ ಧ್ವನಿ ಅಡಗಿಸುತ್ತಾರೆ..

ನಾವು ಎಚ್ಚೆತ್ತುಕೊಳ್ಳಬೇಕಿದೆ. ಕೊಲೆಗಡುಕರು, ಭ್ರಷ್ಟರು, ಮಾಫಿಯಾದವರು, ರೌಡಿಗಳು, ಖದೀಮರು ಬಾಯಿಗೆ ಬಂದಂತೆ ರಾಜಾರೋಷವಾಗಿ ಮಾತನಾಡುವಾಗ ದೇಶದ ಹಿತದೃಷ್ಟಿಯಿಂದ ಒಳ್ಳೆಯ ಮಾತನಾಡುವ ನಾವು ಹೆದರಬೇಕೇ?..

**ಯೋಚಿಸುವ ಸಮಯ ನಮ್ಮದು..**




# ಕಣ್ಣಿನ ಕುರಿತು ನಿರ್ಲಕ್ಷ್ಯ ಸಲ್ಲದು :ಡಾ.ಪ್ರಭುಗೌಡ

ಉದಯರಶ್ಮಿ ನ್ಯೂಸ್

ದೇವರಹಿಪ್ಪರಗಿ: ಕಣ್ಣು ಅತ್ಯಂತ ಮಹತ್ವದ ಅಂಗ. ಅದರ ಕುರಿತು ನಿರ್ಲಕ್ಷ್ಯ ಸಲ್ಲದು ಎಂದು ಅನುಗ್ರಹ ಕಣ್ಣಿನ ಆಸ್ಪತ್ರೆ ಮುಖ್ಯಸ್ಥ ಡಾ.ಪ್ರಭುಗೌಡ ಲಿಂಗದಳ್ಳಿ(ಚಬನೂರ) ಹೇಳಿದರು.

ತಾಲ್ಲೂಕಿನ ಕೋರವಾರ ಗ್ರಾಮದಲ್ಲಿ ಅನುಗ್ರಹ ಕಣ್ಣಿನ ಆಸ್ಪತ್ರೆ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಸಹಯೋಗದಲ್ಲಿ ಇತ್ತೀಚಿಗೆ ಜರುಗಿದ ಉಚಿತ ನೇತ್ರ ತಪಾಸಣಾ ಶಿಬಿರದಲ್ಲಿ ಪಾಲ್ಗೊಂಡು ಮಾತನಾಡಿದರು, ಗ್ರಾಮೀಣ ಭಾಗದಲ್ಲಿ ಕಣ್ಣಿನ ಆರೋಗ್ಯದ ಕುರಿತು ಜಾಗೃತಿ ಮೂಡಿಸುವ ಸಲುವಾಗಿ ಇಂತಹ ಉಚಿತ ನೇತ್ರ ತಪಾಸಣಾ ಶಿಬಿರಗಳನ್ನು ಏರ್ಪಡಿಸಲಾಗುತ್ತಿದೆ. 40 ವರ್ಷ ಮೀರಿದ ಪ್ರತಿಯೊಬ್ಬರು ಕಣ್ಣು ಪರೀಕ್ಷೆ ಮಾಡಿಸಿಕೊಂಡು ತಮ್ಮ ಕಣ್ಣಿನ ಆರೋಗ್ಯದ ಕುರಿತು ವಿಶೇಷ ಕಾಳಜಿ ವಹಿಸುವಂತೆ ಕರೆ



ನೀಡಿದರು.

ಸ್ಥಳೀಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಸಂಗಮೇಶ ಛಾಯಾಗೋಳ ಮಾತನಾಡಿ, ಇಂದಿನ ಶಿಬಿರದಲ್ಲಿ ಗ್ರಾಮೀಣ ಪ್ರದೇಶದ ಸುಮಾರು 450 ಜನ ತಪಾಸಣೆಗೆ ಒಳಗಾಗಿದ್ದಾರೆ. ಇದರಲ್ಲಿ ಸುಮಾರು 175 ಜನರಿಗೆ ಶಸ್ತ್ರಚಿಕಿತ್ಸೆಗೆ ಆಯ್ಕೆಯಾಗಿದ್ದು, ಶಿಬಿರ ಯಶಸ್ವಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸಂಗನಗೌಡ ಪಾಟೀಲ, ಮಲ್ಲನಗೌಡ ಬಿರಾದಾರ, ಭೋಜಪ್ಪಗೌಡ ಬಿರಾದಾರ, ಅಪ್ಪಾಸಾಹೇಗೌಡ ಪಾಟೀಲ, ಸಂಗಮೇಶ ಮ್ಯಾಗೇರಿ, ಶ್ರೀನಾಥ ಪಾಟೀಲ, ಬಸನಗೌಡ ಬಿರಾದಾರ, ಸುಬ್ಬನಗೌಡ ಪಾಟೀಲ, ಶರಣಪ್ಪ ತಾಳಿಕೋಟಿ, ನಾನಾಗೌಡ ಬೋರಾವತ, ಶರಣಬಸು ಸುಂಬಡ, ಭೀಮರಾಯ ಯತ್ನಾಳ, ಡಿ.ಸಿ.ಹೊನಮಟ್ಟಿ, ಕೃಷಿ ಪತ್ತಿನ ಸಹಕಾರಿ ಸಂಘ ಹಾಗೂ ಅನುಗ್ರಹ ಕಣ್ಣಿನ ಆಸ್ಪತ್ರೆ ಸಿಬ್ಬಂದಿ ಇದ್ದರು.

# ಇಂದು ಸಾಧಕರಿಗೆ ಪ್ರಶಸ್ತಿ ಪ್ರಧಾನ & ಕವಿಗೋಷ್ಠಿ

ಉದಯರಶ್ಮಿ ನ್ಯೂಸ್

ಸಿಂದಗಿ: ಪಟ್ಟಣದ ಕಲಬುರಗಿ ರಸ್ತೆಯ ಹೊರವಲಯದಲ್ಲಿರುವ ಲೊಯೋಲ್ ಶಾಲೆಯ ಆವರಣದಲ್ಲಿ ಮಾ.20 ಬೆಳಿಗ್ಗೆ 11ಗಂಟೆಗೆ ನಬಿರೋಶನ್ ಪ್ರಕಾಶನ, ಬೋರಗಿ ಹಾಗೂ ಲೊಯೋಲ್ ಶಾಲೆಯ ಸಹಯೋಗದಲ್ಲಿ ವಿಶ್ವ ಮಹಿಳಾ ದಿನಾಚರಣೆ, ಸಾಧನೆ ಗೈದ ಸಾಧಕ–ರಿಗೆ ಪ್ರಶಸ್ತಿ ಪ್ರಧಾನ ಹಾಗೂ ಕವಿಗೋಷ್ಠಿ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಚಾಲಕ ಮೌಲಾಲಿ ಆಲಗೂರ ತಿಳಿಸಿದ್ದಾರೆ.

ಕಾರ್ಯಕ್ರಮದ ಉದ್ಘಾಟಕರಾಗಿ ಸಿಂದಗಿ ಇನ್ನರ್ ವೀಲ್ ಕ್ಲಬ್ ಮಾಜಿ ಅಧ್ಯಕ್ಷೆ ನಾಗರತ್ನ ಮನಗೂಳಿ ಆಗಮಿಸಲಿದ್ದಾರೆ. ಗ್ರೇಡ್ 2 ತಹಶೀಲ್ದಾರ್ ಇಂದಿರಾಬಾಯಿ ಬಳಗಾನೂರ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅಥಿ–ತಿಗಳಾಗಿ, ಪ್ರಾಚಾರ್ಯ ಫಾ.ಲ್ಯಾನ್ಸಿ ಫರ್ನಾಂಡಿಸ್, ಕಸಾಪ ನಿಕಟ ಪೂರ್ವ ತಾಲೂಕಾಧ್ಯಕ್ಷ ರಾಜಶೇಖರ ಕೂಚಬಾಳ, ಚೇತನಗೌಡ ಬಿರಾದಾರ, ಸಭಿಯಾಬೇಗಂ ಮರ್ತೂರ, ಸುನಂದಾ ಯಂಪುರೆ ನಬಿಪಟೇಲ್ ಆಲಗೂರ ಇರಲಿದ್ದಾರೆ.

ಸರಿಗಮಪ ಗಾಯಕಿ ಸಾಕ್ಷಿ ಹಿರೇಮಠ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಬೆಳಗಾವಿಯ ಅಂತರಾಷ್ಟ್ರೀಯ ಕ್ರೀಡಾಪಟು ರಿಜ್ವಾನ್ ಜಮಾದಾರ, ಬಿ.ಎಸ್. ಡಬ್ಲ್ಯೂ ವಿಭಾಗದಲ್ಲಿ ಚಿನ್ನದ ಪದಕ ಪಡೆದ ಸುರೇಖಾ ಬಿರಾದಾರ, ಮಹಿಳಾ ಸಾಂತ್ವಾನ ಕೇಂದ್ರದ ಸಮಾಜ ಕಾರ್ಯಕರ್ತೆ ರಶ್ಮಿ ಮಹಾಂತೇಶ ನೂಲಾನವರ, ನೀಲಮ್ಮ ಗೌರ ಅವರಿಗೆ ವಿಶೇಷವಾಗಿ ಸನ್ಮಾನಿಸಲಾಗುವುದು. ಹಲವಾರು ಮಹಿಳಾ ಕವಿಗಳು ಕವಿಗೋಷ್ಠಿಯಲ್ಲಿ ಭಾಗವಹಿಸುವರು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬೀಗ ತೆರೆಯದ ಶೌಚಾಲಯ: ಮಹಿಳೆಯರು ಹಿಡಿ ಶಾಪ

**ಉದಯರಶ್ಮಿ ನ್ಯೂಸ್**

ಕಲಕೇರಿ: ಹಲವು ವರ್ಷಗಳ ಹೋರಾಟದ ಫಲವಾಗಿ ಕಳೆದ 6 ವರ್ಷಗಳ ಹಿಂದೆ ಪ್ರಾರಂಭವಾದ ಸ್ಥಳೀಯ ಬಸ್ಸನಿಲ್ದಾಣ ಕಾಮಗಾರಿ ಇನ್ನು ಮುಗಿಯದೇ ಆಮೆಗತಿಗಿಂತಲೂ ಸಾವಕಾಶವಾಗಿ ನಡೆಯುತ್ತಿರುವುದು ಸಾರ್ವಜನಿಕರ ಹಿಡಿ ಶಾಪಕ್ಕೆ ಗು-ರಿಯಾಗಿದೆ, ಅಧಿಕಾರಿಗಳು ಯಾಕೆ ಇಷ್ಟು ನಿರ್ಲಕ್ಷ ತೋರಿಸುತ್ತಿದ್ದಾರೆ ಗೊತ್ತಿಲ್ಲ, ಬೇಗನೇ ಸಂಪೂರ್ಣ ಕಾಮಗಾರಿ ಮುಗಿಸುವಂತೆ ಸ್ಥಳೀಯರು ಆಗ್ರಹಿಸುತ್ತಿದ್ದಾರೆ.



ಅನೇಕ ಹೋರಾಟ ಹಾಗೂ ಮಾಜಿ ಶಾಸಕರಾದ ಸೋಮನಗೌಡ ಪಾಟೀಲ ಅವರ ಕಾಳಜಿಯಿಂದ ಪ್ರಾರಂಭವಾದ ಬಸ್ಸ ನಿಲ್ದಾಣ 6 ವರ್ಷಗಳೆ ಕಳೆದರೂ ಇನ್ನು

ಮುಗಿಯದಿರುವುದು ವಿಪರ್ಯಾಸ, ಕೇವಲ ಒಂದು ಕಟ್ಟಡ ಕಟ್ಟಿ ಅದರಲ್ಲಿ ಕಂಟ್ರೋಲರ್ ರೂಮ್ ಮಾಡಿದರೆ ಮುಗಿಯಿತೇ, ಹೇಗೆ ಇನ್ನು ನಿಲ್ದಾಣದ ಒಳಾಂಗಣದಲ್ಲಿ ಸಿಮೆಂಟ್ ಹಾಸಿಗೆಯಾಗಬೇಕು, ಜೊತೆಗೆ ಬಸ್ಸು ನಿಲ್ಲುಗಡೆಯಲ್ಲಿ ಮೇಲ್ಚಾವಣಿ ಮಾಡಿ ಸಾರ್ವಜನಿಕರಿಗೆ ಸುಸಜ್ಜಿತವಾದ ನೀರು, ಕುಳಿತುಕೊಳ್ಳಲು ಆಸನ, ವಿಶ್ರಾಂತಿ ಕೋಣೆ, ವ್ಯವಸ್ಥಿತವಾದ ಮಹಿಳಾ ಹಾಗೂ ಪುರುಷರ ಶೌಚಾಲಯ ನಿರ್ಮಾಣ ಮಾಡಿ ಅವಶ್ಯಕತೆಗೆ ತಕ್ಕಂತೆ ಇನ್ನು ಪ್ರಮುಖ ಮಾರ್ಗದಲ್ಲಿ ಹೆಚ್ಚಿನ ಬಸ್ಸ ಸೌಕರ್ಯ ಮಾಡಿದಾಗ ಇದು ಸಾರ್ಥಕವಾಗುವುದು ಎನ್ನುತ್ತಾರೆ ಹಿರಿಯರಾದ ಡಾ॥ ಈರಣ್ಣ ಗುಮಶೆಟ್ಟಿ

ಇನ್ನು ನೆಪಮಾತ್ರಕ್ಕೆ ಶೌಚಾಲಯವಿದ್ದರೂ ಗುತ್ತಿಗೆದಾರ ಅದರ ಬಾಗಿಲು ಬೀಗ ಹಾಕಿಕೊಂಡು ಮಂಗಮಾಯವಾಗಿದ್ದಾನೆ ಶೌಚಾಲಯವಿದ್ದರೂ ಬಯಲು ಬರ್ಹಿದೇಸೆಯೇ ಗತಿ ಎನ್ನುತ್ತಾರೆ ಮಹಿಳೆಯರು. ದೊಡ್ಡ ಗ್ರಾಮವಾಗಿರುವ ಇಲ್ಲಿ ಪ್ರತಿನಿತ್ಯ ನೂರಾರು ಪ್ರಯಾಣಿಕರು ಆಗಮಿಸುವರು, ಆದರೆ ಶೌಚಾಲಯವಿಲ್ಲದೇ ಎಲ್ಲಿಯೂ ಮೂತ್ರ ವಿಸರ್ಜನೆ ಮಾಡಲು ಅವಕಾಶ ಇರದೇ ಹೈರಾಣಾಗುತ್ತಿದ್ದೇವೆ ಎನ್ನುತ್ತಾರೆ ಶಾಲಾ ವಿದ್ಯಾರ್ಥಿನಿಯರು

ಈ ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಬೇರೆ ಗುತ್ತಿಗೆದಾರರನ್ನು ನೇಮಿಸಿ ಸರಿಯಾಗಿ ನೀರಿನ ವ್ಯವಸ್ಥೆ ಮಾಡಿ ಶೌಚಾಲಯವನ್ನು ಸ್ವಚ್ಛವಾಗಿ ನೋಡಿಕೋಳ್ಳಬೇಕು ಎಂದು ಮಹಿಳಾ ಪ್ರಯಾಣಿಕರ ಬೇಡಿಕೆಯಾಗಿದೆ. ಇಲ್ಲವಾದಲ್ಲಿ ಹೋರಾಟ ಮಾಡಬೇಕುವುದು ಎನ್ನುತ್ತಿದ್ದಾರೆ.

# ಮಕ್ಕಳು ತಂದೆ-ತಾಯಿಯ ಋಣ ತೀರಿಸಬೇಕು :ನವಲಿ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ತಮ್ಮ ಎಲ್ಲ ಸುಖಗಳನ್ನು ತ್ಯಾಗ ಮಾಡಿ, ಕಷ್ಟಪಟ್ಟು ಲಾಲನೆ ಪಾಲನೆ ಮಾಡಿ ಮಕ್ಕಳಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟು ಬೆಳೆಸುವ ಜೀವಗಳೆಂದರೆ ಅದು ತಂದೆ-ತಾಯಿ ಮಾತ್ರ. ಅವರ ಮುಪ್ಪಾವಸ್ಥೆಯಲ್ಲಿ ನಾವು ಅವರನ್ನ ಮಕ್ಕಳಂತೆ ನೋಡಿಕೊಂಡು ಅವರ ಋಣ ತೀರಿಸಬೇಕು ಎಂದು ಪ್ರಭಾರ ಮುಖ್ಯಗುರು ಸಂಗಮೇಶ ನವಲಿ ಹೇಳಿದರು.

ತಾಲೂಕಿನ ಗುಡಿಹಾಳ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ ಸಭೆ-2 ಹಾಗೂ ಏಳನೇ ತರಗತಿ ಮಕ್ಕಳ ಬೀಳ್ಕೊಡುವ ಸಮಾರಂಭದ ಜೊತೆಗೆ ಹಮ್ಮಿಕೊಳ್ಳಲಾಗಿದ್ದ ಏಳನೇ ತರಗತಿ ಮಕ್ಕಳಿಂದ ತಂದೆ ತಾಯಂದಿರ ಪಾದಪೂಜೆ ವಿಶೇಶ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬೆಳೆದು ದೊಡ್ಡವರಾದ ಮೇಲೆ ತಂದೆ ತಾಯಿಯನ್ನು ಕಡೆಗಣಿಸುತ್ತಿರುವದನ್ನು, ತಾವು ದೊಡ್ಡ ಸ್ಥಾನಕ್ಕೆ ಬರಲು ದುಡಿದ



ಜೀವಿಗಳನ್ನು ಇಂದಿಗೆ ಅನಾಥಾಶ್ರಮಗಳಿಗೆ ಅಟ್ಟುತ್ತಿರುವದನ್ನು ನೋಡುತ್ತಿದ್ದೇವೆ. ಯಾವ ಮಕ್ಕಳು ತಮ್ಮ ತಂದೆ ತಾಯಿರನ್ನು ಅನಾಶ್ರಮಕ್ಕೆ ಅಟ್ಟುತ್ತಾರೋ ಮುಂದೊಂದು ದಿನ ಅದೇ ಅನಾಥಾಶ್ರಮದಲ್ಲಿ ತಾವು ಕಾಲ ಕಳೆಯುವ ಪರಿಸ್ಥಿತಿ ಬಂದೊಗುತ್ತದೆ ಅನ್ನೋದನ್ನ ಮರೆಯಬಾರದು ಎಂದರು.


ಕಾರ್ಯಕ್ರಮವನ್ನು ಉದ್ಘಾಟಿಸಿ ಕ್ಷೇತ್ರ ಸಮನಯಾಧಿಕಾರಿ ಯು.ಬಿ.ಧ-ರಿಕಾರ ಮಾತನಾಡಿ, ತಂದೆ ತಾಯಿಯರ ಪಾದಪೂಜೆಯ ಮೂಲಕ ಬೀಳ್ಕೊಡುಗೆ ಕಾರ್ಯಕ್ರಮ ಹಮ್ಮಿಕೊಂಡಿರುವದು ಶ್ಲಾಘನೀಯ ಎಂದರು.

ಬಿಆಯ್‌ಇಆರ್‌ಟಿ ಎಸ್.ಎಸ್. ರಾಮತಾಳ, ಎಸ್‌ಡಿಎಂಸಿ ಸದಸ್ಯ ರಾಮನಗೌಡ ಹೂಲಗೇರಿ ಸಮೂಹ ಸಂಪನ್ಮೂಲ ವ್ಯಕ್ತಿ ಎಸ್.ಎಸ್.ಬಾಬಣ್ಣವರ, ಬಸಲಿಂಗಪ್ಪಗೌಡ ನರಸಣಗಿ, ರಾಮನಗೌಡ ಬಿರಾದಾರ, ಗುರಣ್ಣ ಜಂಗಾಣಿ, ಸುನೀಲ ಗುರಡ್ಡಿ, ರೇಣುಕಾ ಮೂರ್ತಿ, ಭಾಗ್ಯಶ್ರೀ ಲಿಂಗದಳ್ಳಿ, ಸುವರ್ಣ ಬಿರಾದಾರ, ಬಸಮ್ಮ ಮಾಡಗಿ, ಶಾರಮ್ಮ ಹಿರೇಮಠ, ಗುರಮ್ಮ ಚಲವಾದಿ, ಶಾಂತಾ ಚಲವಾದಿ, ಪ್ರಮೀಳಾ ದಾಸರ, ಶಿಕ್ಷಕಿ ಲಕ್ಷ್ಮೀ ಮನಿಕಟ್ಟಿ ಅತಿಥಿ ಶಿಕ್ಷಕ ಕುಮಾರ ಪ್ರಭುಗೌಡ ಬಿರಾದಾರ, ಯಲ್ಲಮ್ಮ ಉತಾಳೆ, ಕಾಶಿಬಾಯಿ ಹಾದಿಮನಿ ಸೇ-ರಿದಂತೆ ಮತ್ತೀತರರು ಇದ್ದರು.

# ಶಾಲೆಗಳು ವಿದ್ಯಾರ್ಥಿಗಳ ಭವಿಷ್ಯ ನಿರ್ಮಿಸುವ ದೇಗುಲಗಳು

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಶಾಲೆಗಳು ಕೇವಲ ವಿದ್ಯಾ ಕೇಂದ್ರಗಳಲ್ಲ. ವಿದ್ಯಾರ್ಥಿಗಳ ಭವಿಷ್ಯ ನಿರ್ಮಿಸುವಲ್ಲಿ ಮತ್ತು ದೇಶವನ್ನು ಪ್ರಗತಿಯತ್ತ ಕೊಂಡೊಯ್ಯುವಲ್ಲಿ ಶ್ರಮಿಸುವ ದೇವಾಲಯಗಳು ಎಂದು ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷರೂ ಆದ ಹಿರಿಯ ನ್ಯಾಯವಾದಿ ವ್ಹಿ.ಎಂ.ನಾಗಠಾಣ ಹೇಳಿದರು.



ಪಟ್ಟಣದ ವ್ಹಿಬಿಸಿ ಹೈಸ್ಕೂಲ್ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಎಸ್-ಎಸ್‌ಎಲ್‌ಸಿ ವಿದ್ಯಾರ್ಥಿಗಳ ಬೀಳ್ಕೋಡುವ ಸಮಾರಂಭ ಹಾಗೂ ನ್ಯಾಯಾಧೀಶೆ ಐಶ್ವರ್ಯ ಗುಡದಿನ್ನಿ ಅವರಿಗೆ ಗೌರವ ಸನ್ಮಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಭವ್ಯ ಭಾರತದ ಭವಿಷ್ಯ ಶಾಲಾ ಕೊಠಡಿಗಳಲ್ಲಿ ಅಡಗಿದೆ ಅನ್ನೋ ಮಾತು ಯಾರೂ ಮರೆಯುವಂತಿಲ್ಲ. ವಿದ್ಯಾರ್ಥಿಯ

ಸರ್ವಾಂಗೀಣ ಬೆಳವಣಿಗೆಯಲ್ಲಿ ಗುರುವಿನ ಪಾತ್ರದ ಜೊತೆಗೆ ಪಾಲಕರ ಪ್ರೋತ್ಸಾಹ ಹಾಗೂ ಮಾರ್ಗದರ್ಶನ ಕೂಡ ಅತೀ ಅವಶ್ಯ. ವಿದ್ಯಾರ್ಥಿಯೂ ಸಹ ತನ್ನ ವಿದ್ಯಾರ್ಥಿ ಜೀವನದಲ್ಲಿ ದುಶ್ಚಟಗಳಿಗೆ ಬಲಿಯಾಗದೇ, ನಿರಂತರ ಅಭ್ಯಾಸವನ್ನು

ಮೈಗೂಡಿಸಿಕೊಂಡಲ್ಲಿ ಶ್ರೇಷ್ಠ ವ್ಯಕ್ತಿಯಾಗಿ ಹೊರಬರಲು ಸಾಧ್ಯ ಎಂದರು.

ಕಸಾಪ ನಿಕಟಪೂರ್ವ ಅಧ್ಯಕ್ಷ ಎಂ.ಬಿ.ನಾವದಗಿ ಮಾತನಾಡಿ, ಸಾಧಿಸಬೇಕೆಂಬ ಛಲ ಮತ್ತು ಸತತ

ಪ್ರಯತ್ನವಿದ್ದರೆ ಸಾಧನೆ ಸುಲಭ ಎಂದರು.

ಉಪನ್ಯಾಸಕ ಪರಶುರಾಮ ಚೌಡಕೇರ, ಹಿರಿಯ ನ್ಯಾಯವಾದಿಗಳಾದ ಎಸ್.ಎಂ.ಗುಡದಿನ್ನಿ ಮತ್ತು ಎಂ. ಎಸ್.ನಾವದಗಿ ಸೇರಿದಂತೆ ಶಾಲಾ ಬೋಧಕ ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು. ಶಿಕ್ಷಕ ವಾಗೇಶ್ ಹಿರೇಮಠ

ನಿರೂಪಿಸಿದರು.

# ಮಹಿಳೆ ಮಾನಸಿಕವಾಗಿ ಸದೃಢವಾಗಬೇಕು :ಡಾ.ರೇಖಾ

**ಉದಯರಶ್ಮಿ ನ್ಯೂಸ್**

ವಿಜಯಪುರ: ಇಂದು ಮಹಿಳೆ ಎಲ್ಲಾ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸುತ್ತಾಳೆ ಆದರೆ ಅವಳಿಗೆ ಮಾನಸಿಕ ಅಭದ್ರತೆ ಕಾಡುತ್ತಿದೆ. ತನ್ನ ಮತ್ತು ಮನೆತನದ ಗೌರವ ಕಾಪಾಡಲು ತನಗಾದ ಕಿರುಕುಳ ಹೊರ ಹಾಕಿದರೆ ಎಲ್ಲಿ ತನ್ನ ಗೌರವಕ್ಕೆ ಧಕ್ಕೆ ಆಗಬಹುದು ಎಂಬ ಹೆದರಿಕೆ ಇದೆ ಎಂದು ಡಾ.ರೇಖಾ ಪಾಟೀಲ ಹೇಳಿದರು.

ವಿಜಯಪುರ ಜಿಲ್ಲಾ ಕನ್ನಡ ಸಾಹಿತ್ಯ




ಪರಿಷತ್ತು ಸಭಾ ಭವನದಲ್ಲಿ ಹಮ್ಮಿಕೊಂಡ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆಗೆ ಎಲ್ಲ ಹಂತದಲ್ಲಿಯೂ ಶೋಷಣೆ ಕಾಡುತ್ತಿದೆ. ಅದಕ್ಕೆ ಮಹಿಳೆ ಮಾನಸಿಕವಾಗಿ ಸದೃಢವಾಗಬೇಕು ಎಂದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ

ಬಿ ಕೆ ಸರೋಜಾ ಅಕ್ಕನವರು ಮಾತನಾಡಿ, ಬದುಕಿಗೆ ಸಂಸ್ಕಾರ ಮುಖ್ಯ. ಅದು ಕುಟುಂಬ ಮೂಲವಾಗಿದೆ. ಅಲ್ಲಿ ಮಹಿಳೆ ಸಂಸ್ಕಾರ ಕಲಿಸುವದರ ಮುಖಾಂತರ ಸಮಾಜದಲ್ಲಿ ಸಮಾನತೆ ತರುತ್ತಾಳೆ, ಮಕ್ಕಳಿಗೆ ಸಂಪ್ರದಾಯ ಹಾಗೂ ಮೌಲ್ಯಗಳನ್ನು ಬಾಲ್ಯದಲ್ಲಿಯೇ ಕಲಿಸುವ ಕೆಲಸ ಆಗಬೇಕು ಎಂದರು.

ಅತಿಥಿಯಾಗಿ ಮಾತನಾಡಿದ ಕಮಲಾ ಮುರಾಳ ಅವರು, ಗಂಡು ಮತ್ತು ಹೆಣ್ಣು ಒಂದೇ ನಾಣ್ಯದ ಎರಡು ಮುಖ ಇದ್ದ ಹಾಗೆ, ಪುರುಷರು ಮಹಿಳೆಯರನ್ನು ನೋಡುವ ದೃಷ್ಟಿ ಬದಲಿಸಿಕೊಳ್ಳಬೇಕು ಎಂದರು.

ವೇದಿಕೆ ಮೇಲಿದ್ದ ಶಿಲ್ಪಾ ಹಂಜಿ ಅವರು ಮಾತನಾಡುತ್ತ, ಸಾಕಷ್ಟು ಮಹಿಳೆಯರು ದೇಶ ಸೇವೆಗೆ ತಮ್ಮ ಬಲಿದಾನ ಮಾಡಿದ್ದು ನೋಡುತ್ತೇವೆ. ತಾಳ್ಮೆ ಸಹನೆ ಸಹಕಾರಗಳಿಂದ ಸುಂದರ ಕುಟುಂಬ ನಿರ್ಮಾಣ ಮಾಡುತ್ತಾಳೆ ಎಂದರು.

ಜಯಶ್ರೀ ತೆಲಗಿ, ಗೀತಾ ಕುಲಕರ್ಣಿ, ಚೈತನ್ಯ ಮುದ್ದೇಬಿಹಾಳ, ಸುನಂದ ಯಂಪೂರೆ, ಶೋಭಾ ಹರಿಜನ, ರೂಪಾ ರಜಪೂತ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಅಕ್ಕಮ್ಮ ನಾಯಕ ಮಾತನಾಡುತ್ತ, ಮಹಿಳೆ ತಮ್ಮ ಹಕ್ಕು ಪಡೆಯುವುದರ ಮೂಲಕ ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಕಸಾಪ ಜಿಲ್ಲಾ ಅಧ್ಯಕ್ಷ ಹಾಸಿಂಪೀರ ವಾಲೀಕಾರ, ಡಾ ಸಂಗಮೇಶ, ಅಭಿಷೇಕ ಚಕ್ರವರ್ತಿ, ಸುಭಾಷಚಂದ್ರ ಕನ್ನೂರ, ಎಸ್ ಐ ಬಿರಾದಾರ, ರಾಜೇಸಾಬ ಶಿವನಗುತ್ತಿ, ಸಾವಿತ್ರಿ ಮನೋಜ, ಅಹ್ಮದ ವಾಲೀಕಾರ, ಅಲ್ಲಿಸಾಬ ಖಡೆಕೆ, ಅಣ್ಣುಗೌಡ ಬಿರಾದಾರ, ಲತಾ ಗುಂಡಿ, ಡಾ ವಿಜಯಲಕ್ಷ್ಮಿ ಪವಾರ , ಪ್ರಭು ಮಲ್ಲಿಕಾರ್ಜುನಮಠ, ಪ್ರದೀಪ ಕುಲಕರ್ಣಿ, ಹುಸೇನಸಾಬ ಹದರಿ, ಲತಾ ವಾಲೀಕಾರ, ವಿಜಯಲಕ್ಷ್ಮಿ ಕೆಂಗನಾಳ, ಅಬ್ದುಲ್ ರಜಾಕ ಮುಲ್ಲಾ, ತೇಜಶ್ವಿನಿ ವಾಂಗಿ ಶಾಂತಾ ವಿಭೂತಿ , ಶೋಭಾ ಬಡಿಗೇರ, ಮುಂತಾದವರು ಉಪಸ್ಥಿತ-ರಿದ್ದರು.

ಕಾರ್ಯಕ್ರಮವನ್ನು ಡಾ ಮಾಧವ ಗುಡಿ ನಿರ್ವಹಿಸಿದರು.

# ತೊರೆದು ಜೀವಿಸಬಹುದೇ

"ಮಾನವ ಜನ್ಮ ದೊಡ್ಡದು...."ಎಂಬ ದಾಸರವಾಣಿಯಂತೆ.... ಯೋಚಿಸುವ, ವಿಶ್ಲೇಷಿಸುವ,ಸರಿ ತಪ್ಪುಗಳ ತಿಳುವಳಿಕೆ ಮಾನವರಿಗೆ ಮಾತ್ರ ಈ ಜಗದಲಿ ಇರುವುದು...

ನಮಗೇ ಗೊತ್ತಿಲ್ಲದಂತೆ ಉಸಿರಾಟ, ರಕ್ತಸಂಚಾರ, ಪಚನಕ್ರಿಯೆ ,ಆಲೋಚನ ಪ್ರಕ್ರಿಯೆ ಜೀವಿತಾವಧಿ ಇರುವ ತನಕ ನಡೆಯುತ್ತಲೇ ಇರುತ್ತದೆ. ವಿಜ್ಞಾನ ಎಷ್ಟು ಮುಂದುವರಿದರೂ ಅದರ ಹಿಂದಿರುವ ಶಕ್ತಿಯನ್ನು ಅರಿಯಲು ಆಗಲಿಲ್ಲ. ಎಲ್ಲಾ ದೈಹಿಕ ಪ್ರಕ್ರಿಯೆಗಳು ಆಲೋಚನೆಗಳು ಯಾರ ಆಣತಿಯಂತೆ ನಿಲ್ಲುತ್ತದೆ, ಯಾವಾಗ ನಿಲ್ಲುತ್ತದೆ ಊಹಿಸಲೂ ಸಾಧ್ಯವಿಲ್ಲ. ಹುಟ್ಟಿನಿಂದ ಹಿಡಿದು ಸಾವಿನ ತನಕದ ಎಲ್ಲಾ ಕ್ರಿಯೆಗಳ ಸೂತ್ರಧಾರನಿಗೆ/ಳಿಗೆ.. ದೇವರೆಂದು ಕರೆಯುವುದರಲ್ಲಿ, ಪೂಜಿಸುವುದರಲ್ಲಿ ಸಿಗುವ ನೆಮ್ಮದಿಯ ರುಚಿ ಮಾನವನಾದವನಿಗೆ ಮಾತ್ರ ಗೊತ್ತು. ಧರ್ಮ, ಜಾತಿ, ಲಿಂಗ ಭೇದಗಳಿಲ್ಲದೆ ಎಲ್ಲರ ಮನದಲ್ಲಿ ಇರುವ ಅಚಲ ವಿಶ್ವಾಸ ಒಂದೇ..... ಪೊರೆಯುವವ ಒಬ್ಬ ಇದ್ದಾನೆ ಎಂದು.

ನಮ್ಮ ನಂಬಿಕೆಯ ದೇವರು ಮೆಚ್ಚುವ ರೀತಿಯಲ್ಲಿ ಬದುಕ ಬೇಕೆಂಬುದು ಎಲ್ಲರ ಜೀವಿತದ ಇಚ್ಛೆ...ಕಮಲದ ಎಲೆಯ ಮೇಲಿನ ನೀರಿನಂತೆ ಸಂಸಾರದಲ್ಲಿ ಇದ್ದೂ ಅಂಟದೆ, ನಮ್ಮ ಕರ್ತವ್ಯ ಮುಗಿಸಿ ಅವನ ಚರಣವ ಪೂಜಿಸುವ ಆನಂದ ಯಾರೂ ಬೇಡ ಎನ್ನಲಾರರು. ಹಾಗಾಗಿಯೇ ಭಕ್ತಿ ಪರಾಕಾಷ್ಠೆಯಲ್ಲಿ ದಾಸರು "ತೊರೆದು ಜೀವಿಸ ಬಹುದೇ ಹರಿ ನಿನ್ನ ಚರಣಗಳ "ಎಂದಿದ್ದಾರೆ.

ಆಧ್ಯಾತ್ಮಿಕ ವಿಚಾರಗಳ ಬಗ್ಗೆ ಹದಿಹರೆಯದ ದಿನಗಳಲ್ಲಿ ಎಲ್ಲವೂ ಮೂಢನಂಬಿಕೆಗಳು ಏನೂ ಮಾಡಲು ಆಗದವರು ದೇವರನ್ನು ಹುಟ್ಟು ಹಾಕಿದ್ದು ಎನ್ನುವ ಭಾವ ಇದ್ದಿತ್ತು ಅದನ್ನು ಒಮ್ಮೆ ವಿದ್ವಾನ್ ಆದ ನನ್ನ ಸೋದರಮಾವನಲ್ಲಿ ವಾದಿಸುತ್ತಾ ಹೇಳಿದ್ದೆ.."ಯಾರು ನೋಡಿದಾರೆ ದೇವರನ್ನು, ಸುಮ್ಮನೆ ಎಲ್ಲಾ ಢಂಬಾಚಾರ "ಎಂದು ಆಗ ಅವರು ಹೇಳಿದ್ದರು ... ಫ್ಯಾನ್, ಲೈಟ್, ಮಿಕ್ಸಿ, ಫ್ರಿಜ್, ಟಿವಿ ಎಲ್ಲದರ ಕೆಲಸ ಬೇರೆ ಬೇರೆ ಆದರೆ ನಡೆಸುವ ವಿದ್ಯುತ್ ಶಕ್ತಿ ಒಂದೇ... ಅದು ಇದೆಯೇ ಇಲ್ಲವೇ ಎಂದು ಮುಟ್ಟಿ ಪರೀಕ್ಷಿಸಿ ನೋಡುತ್ತೇವೆಯಾ? ಹಾಗೆ ದೇವರ ಅಸ್ತಿತ್ವವನ್ನು ನೋಡಬೇಕಿಲ್ಲ ಅನುಭವಿಸು...ಆಗ ನಿಜವಾದ ಜೀವನದ





**ಭಾವರಶ್ಮಿ**

– ಡಾ. ಸರಿತಾ ಉಪಾಧ್ಯಾಯ.

("ನಮ್ಮ ಕಥಾ ಅರಮನೆ" ಬರಹಗಾರರು)

**ಉದಯರಶ್ಮಿ ದಿನಪತ್ರಿಕೆ**

ಉದ್ದೇಶ ಹಾಗೂ ನಾವು ಹೇಗಿರಬೇಕು ಎನ್ನುವದು ತಿಳಿಯುತ್ತದೆ...

ಮತ್ತೂ ಮೂಗಿನ ನೇರಕ್ಕೆ ಅನ್ನುವಂತೆ ಕೇಳಿದ್ದೆ...." ಹರಿಯೇ ದೇವರು, ಹರನೇ ದೇವರು, ಅಲ್ಲಾನೇ ದೇವರು, ಜೀಸಸ್ ದೇವರು... ಅಂತ ಹೇಗೆ ನಂಬುವುದು....ಯಾವ ಆಧಾರ ಇದೆ ಕಥೆಯನ್ನು ಬಿಟ್ಟು...? "



ಅದ್ಕೆ ಅವರು ಹೇಳಿದ್ದು..."ನಿನ್ನ ಅಮ್ಮ ಅವರೇ ಅಂತ ನಂಬುತ್ತೀಯಾ? ಆಧಾರ? "

ನಾನು ....." ಖಂಡಿತಾ ನಂಬುತ್ತೇನೆ... ನಾನು ಹುಟ್ಟಿದ್ದು ನೋಡಿದವರಿದ್ದಾರೆ..." ಎಂದೆ

"ನಿನ್ನ ತಂದೆ ಅವರೇ ಎಂದು? ಆಧಾರ?"

"ಹ್ಞೂಂ... ಅಮ್ಮ ಹೇಳಿದಳು... ನಾನು ನಂಬುತ್ತೇನೆ... ಅಲ್ಲ ಅಂದರೆ ಅಮ್ಮನ ಚಾರಿತ್ರ್ಯವನ್ನು ಶಂಕಿಸಿದಂತೆ"


ಇಹದ ಸಂಬಂಧವನ್ನು ಅಮ್ಮ ಹೇಳಿದ್ದು ಸರಿ ಎಂದು ನಂಬಲಾಗಿದೆ... ಇದೇ ದೇವರು ಎಂದು ಅಮ್ಮ ಹೇಳಿದ್ದು ಸರಿ ಅಲ್ಲ ಅನ್ನೋದು ಎಷ್ಟು ಸರಿ...?ಅಮ್ಮ ಹೇಳಿದ ತಂದೆಯನ್ನು ನಂಬಿರುವಂತೆ ದೇವರನ್ನು ನಂಬು... ತಂದೆ ಹೇಗೆ ಒತ್ತಾಸೆಯಾಗಿರುವರೋ, ಹಾಗೆ ಯಾರೂ ಇಲ್ಲದಾಗ .... ದೇವರು ತಂದೆಯಂತೆ ರಕ್ಷಿಸುವ "

ಅಂದಿನಿಂದ ದೇವನ ಇರುವಿಕೆಯ ಬಗ್ಗೆ ಸಂದೇಹ ಬಂದಿಲ್ಲ.... ಸಕಲವೂ ಅವನ ಇಚ್ಛೆ... ಕರ್ತವ್ಯದ ಪ್ರತಿ ಶ್ರದ್ಧೆ ಮಾತ್ರ ನಮ್ಮದು... ಎಲ್ಲಾ ಅವನ ಚರಣಕೆ ಸಮರ್ಪಿತ...ಅವನ ಚರಣವ ತೊರೆದು ಜೀವಿಸಲಾಗದು ಎನಿಸಿದೆ ..

# ಮಡಿವಾಳೇಶ್ವರ ರಥೋತ್ಸವ ಸಂಪನ್ನ

**ಉದಯರಶ್ಮಿ ನ್ಯೂಸ್**

ಢವಳಗಿ: ಗ್ರಾಮದಲ್ಲಿ ಶ್ರೀ ಮಡಿವಾಳೇಶ್ವರರ ರಥೋತ್ಸವ ಮಂಗಳವಾರ ಸಂಜೆ 6:30 ಗಂಟೆಗೆ ಅದ್ದೂರಿಯಾಗಿ ರಥೋತ್ಸವ ಜರುಗಿತು.



ಇದಕ್ಕೂ ಮುಂಚೆ ಸಯಾಂಕಾಲ ಢವಳಗಿ ಗ್ರಾಮದ ಮನೋಹರ ಮುಕ್ಕಣ್ಣಪ್ಪ ಕೋರಿ ಅವರ ಮನೆಯಿಂದ ಗುರುಬಸಪ್ಪ ಕೋಣನವರ ಅವರ ಎತ್ತಿನ ಬಂಡಿಯಲ್ಲಿ ತೇರಿನ ಮೀಣಿ(ಹಗ್ಗ)ವನ್ನು ದೇವಸ್ಥಾನಕ್ಕೆ ವಿವಿಧ ಮಜಲುಗಳಿಂದ ಮೆರವಣಿಗೆಯ ಮೂಲಕ ತೆಗೆದುಕೊಂಡು ಹೋಗಲಾಯಿತು.

ನಂತರ ಮಾದಿನಾಳ ಮತ್ತು ತಾರನಾಳ,ಹಾಗೂ ಹಳ್ಳೂರ ಗ್ರಾಮದಿಂದ ಉತ್ಸವ ಮೂರ್ತಿಯನ್ನು ಬರಮಾಡಿಕೊಂಡು ವಾದ್ಯ ಮಜಲುಗಳೊಂದಿಗೆ ತೇರಿಗೆ ಏರುವ ಕಲಶಗಳು ಪಲ್ಲಕ್ಕಿಯೊಂದಿಗೆ ಗಂಗಸ್ಥಳ ಮಾಡಿ ದೇವಸ್ಥಾನಕ್ಕೆ ಕರೆತರಲಾಯಿತು.

ಸಂಜೆ 6:30 ನಿಮಿಷಕ್ಕೆ ಶ್ರೀ ಮಡಿವಾಳೇಶ್ವರರ ರಥೋತ್ಸವವು 500 ಮೀಟರ್ ದೂರವಿರುವ ಪಾದಗಟ್ಟಿ ಯವರಿಗೆ ಯಾವುದೇ ಅಡೆತಡೆಗಳಿಲ್ಲದೆ ಹೋಗಿ ಬಂದಿತು. ಭಕ್ತರು ತೇರು ಎಳೆಯುವ ಸಂದರ್ಭದಲ್ಲಿ ಉತ್ತತ್ತಿ,ಬಾಳೆಹಣ್ಣು, ಎಸೆದು ತಮ್ಮ ಭಕ್ತಿ ಸಮರ್ಪಿಸಿದರು.


ಇದೇ ವೇಳೆಯಲ್ಲಿ ಪಿಎ[illegible] ಸಂ-ಜಯಕುಮಾರ ತಿಪ್ಪಾರೆಡ್ಡಿ ಹಾಗೂ ಸಿಬ್ಬಂದಿಗಳು ಬಿಗಿಬಂದೋಬಸ್ತ ಮಾಡಿದ್ದರು.

**ಉದಯರಶ್ಮಿ ದಿನಪತ್ರಿಕೆ**

**ಕಾವ್ಯರಶ್ಮಿ**

– ಡಾ. ಸುರೇಶ ನೆಗಳಗುಳಿ

("ನಮ್ಮ ಕಥಾ ಅರಮನೆ" ಬರಹಗಾರರು)



## ಅಳಲು

ನಿನ್ನ ಕರಸ್ಪರ್ಶಕ್ಕೆ ಕಾಯುತಿಹೆ ಮೋಹನನೆ
ಚೆನ್ನು ನೀನಿರೆ ನನ್ನ ಜೊತೆಗೆ ಮತ್ತೆಲ್ಲಿ ಬೇನೆ
ನೀಲಮೇಘ ಶ್ಯಾಮ ನಿನ್ನ ಉಸಿರಲಿ ನಾನು
ಲೀನವಾಗುವೆ ಬಾರೊ ಕೊಳಲೊಡನೆ ನೀನು

ನಿನಗಾಗಿ ಹಗಲಿರುಳು ಕಾಯತ್ತಲೇ ಇರುವೆ
ರಾಧೆಯಿರುವಳು ನಿನ್ನಎದೆಯೊಳಗೆ ಎನುವೆ
ನವಿಲುಗರಿ ಶಿರದವನೇ ನಗೆಯರಸನೇ ಬೇಗ
ತೊಡೆಯಲಿರಿಸೆಯ ತಲೆಯ ನೇವರಿಸಲೀಗ

ನರ್ಮದೆಯ ನಾದಗಳು ಕಿವಿಗೆ ಬಡಿಯುತಿರೆ
ಚೆನ್ನುಡಿಯ ನಿನ್ನ ದನಿಯನ್ನು ಬಯಸುತಿರೆ
ಮುರಳಿಯೇ ಮರಳೆಯಾ ಬಸವಳಿವ ಮುನ್ನ
ನರಳುತಿಹೆ ಸಪ್ರೇಮ ತುಂಬಿ ವಿರಹದ ಬನ್ನ



**Printed by:** AVINASH BIDARI, **Published and Onwed by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR